# ಕರ್ನಾಟಕ ಲೋಕಾಯುಕ್ತ

ನಂ.ಉಪಲೋಕ್-2/ಡಿಇ/794/2016/ಎ.ಆರ್.ಇ-10

ಡಾ:ಬಿ.ಆರ್.ಅಂಬೇಡ್ಕರ್ ವೀದಿ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು-560001,
ದಿನಾಂಕ: 29/10/2021.

## ವಿಚಾರಣಾ ವರದಿ

ಉಪಸ್ಥಿತರು: ಜಿ. ನಂಜುಂಡಯ್ಯ,
ಅಪರ ನಿಬಂಧಕರು ವಿಚಾರಣೆಗಳು-10,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

**ವಿಷಯ:** ಆಪಾದಿತ ಸರ್ಕಾರಿ ನೌಕರ **ಶ್ರೀ ರಾಜೇಗೌಡ,** ಹಿಂದಿನ ಕ್ಷೇತ್ರ ಶಿಕ್ಷಣಾಧಿಕಾರಿ, ಚಿಕ್ಕಮಗಳೂರು ರವರ ವಿರುದ್ಧದ ಇಲಾಖಾ ವಿಚಾರಣೆ ಕುರಿತು.

ಉಲ್ಲೇಖ: 1. ಕಂಪ್ಲೆಂಟ್/ಉಪಲೋಕ್/ಎಂವೈಎಸ್-717/2015/ಡಿಆರ್ಇ-1 ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ ದಿನಾಂಕ: 08/11/2016.
2. ಸರ್ಕಾರದ ಆದೇಶ ಸಂಖ್ಯೆ: ಇಡಿ 69 ಡಿಜಿಒ 2016, ಬೆಂಗಳೂರು, ದಿನಾಂಕ: 28/12/2016.
3. ನಾಮನಿರ್ದೇಶನ ಸಂಖ್ಯೆ.ಉಪಲೋಕ್-2/ಡಿಇ/794/2016, ಬೆಂಗಳೂರು ದಿನಾಂಕ: 31/12/2016.

* * * *

ಈ ದೂರನ್ನು, ದೂರುದಾರರಾದ ಶ್ರೀ ಕೃಷ್ಣಮೂರ್ತಿ, ಸಂಪಾದಕರು, ಜಿಲ್ಲಾ ಅಮೃತ ಪತ್ರಿಕೆ, ಶಂಕರಪುರ, ಚಿಕ್ಕಮಗಳೂರು ರವರು ಆಪಾದಿತ ಸರ್ಕಾರಿ ನೌಕರ **ಶ್ರೀ ರಾಜೇಗೌಡ,** ಹಿಂದಿನ ಕ್ಷೇತ್ರ ಶಿಕ್ಷಣಾಧಿಕಾರಿ, ಚಿಕ್ಕಮಗಳೂರು ರವರ ವಿರುದ್ಧ ಅಕ್ರಮ ಹಣವಸೂಲಿ ಹಾಗೂ ಅಧಿಕಾರ ದುರ್ಬಳಕೆ ಮತ್ತು ಮಾನಸಿಕ ಕಿರುಕುಳ ನೀಡುವುದು ಹಾಗೂ ಹಲವಾರು ರೀತಿಯ ಅವ್ಯವಹಾರಗಳನ್ನು ನಡೆಸಿರುತ್ತಾರೆಂದು ದೂರು ದಾಖಲಿಸಿರುತ್ತಾರೆ.

2. ತನಿಖೆ ಪೂರ್ಣಗೊಂಡ ನಂತರ, ಸರ್ಕಾರಕ್ಕೆ ಕರ್ನಾಟಕ ಲೋಕಾಯುಕ್ತ ಅಧಿನಿಯಮದ ಕಲಂ 12(3)ರಡಿಯಲ್ಲಿ ಉಲ್ಲೇಖ (1)ರಲ್ಲಿ ಕಾಣಿಸಿದಂತೆ, ವರದಿ ಸಲ್ಲಿಸಿದ್ದಾಗಿ, ಸದರಿ ವರದಿಯನ್ವಯ ಕರ್ನಾಟಕ ಸರ್ಕಾರವು ಆದೇಶ ದಿನಾಂಕ: 28/12/2016 ರಂದು, ಮಾನ್ಯ ಉಪಲೋಕಾಯುಕ್ತರವರಿಗೆ ವಿಚಾರಣೆ ಮಾಡಿ ವರದಿ ಸಲ್ಲಿಸುವಂತೆ, ಸರ್ಕಾರಿ ಆದೇಶವನ್ನು ನೀಡಿರುವ ಮೇರೆಗೆ, ಮಾನ್ಯ ಉಪಲೋಕಾಯುಕ್ತರವರು ದಿನಾಂಕ: 31/12/2016 ರಂದು ಅಪರ ನಿಬಂಧಕರು, ವಿಚಾರಣೆಗಳು-10 ರವರಿಗೆ ವಿಚಾರಣೆ ಮಾಡಲು ಆದೇಶಿಸಿರುತ್ತಾರೆ.

3. ನಾಮನಿರ್ದೇಶನದ ಆದೇಶದಂತೆ, ಆ.ಸ.ನೌ ರವರ ವಿರುದ್ಧ ದೋಷಾರೋಪಣೆ (Article of Charge) ಅನ್ನು ರಚಿಸಿದ್ದು, ಸದರಿ ದೋಷಾರೋಪಣೆಯು ಅನುಬಂಧ-1 ಮತ್ತು ಅನುಬಂಧ-2 ರೊಂದಿಗೆ ದುರ್ನಡತೆ ಮತ್ತು ಕರ್ತವ್ಯಲೋಪಕ್ಕೆ ಸಂಬಂಧಪಟ್ಟಂತೆ, ವಿವರಗಳುಳ್ಳ ಆರೋಪವನ್ನು ಆ.ಸ.ನೌ ರವರಿಗೆ ದಿನಾಂಕ: 10/05/2017 ರಂದು ಕಳುಹಿಸಲಾಗಿರುತ್ತದೆ.

**ಅನುಬಂಧ-1**

**ದೋಷಾರೋಪಣೆ-1**

1. ಆಪಾದಿತ ಸರ್ಕಾರಿ ನೌಕರರಾದ ಶ್ರೀ ರಾಜೇಗೌಡ, ಕ್ಷೇತ್ರ ಶಿಕ್ಷಣಾಧಿಕಾರಿ, ಚಿಕ್ಕಮಗಳೂರು, ಪ್ರಸ್ತುತ ಹಿರಿಯ ಉಪನ್ಯಾಸಕರು, ಡಯಟ್, ಹಾಸನ ಆದ ನೀವು :

   (i) 2013-14ನೇ ಸಾಲಿನ 2ನೇ ಜೊತೆ ಬಟ್ಟೆಯನ್ನು ಖರೀದಿಸುವ ಬಗ್ಗೆ ಸರ್ಕಾರದಿಂದ ಹೊರಡಿಸಿರುವ ಸುತ್ತೋಲೆಯನ್ನು ಸಿ.ಆರ್.ಪಿ.ಗಳಿಗೆ ಮತ್ತು ಶಾಲೆಗಳ ಮುಖ್ಯ ಶಿಕ್ಷಕರುಗಳಿಗೆ ವಿತರಿಸದೇ ಇರುವುದರಿಂದ, ಶಾಲೆಯ ಮುಖ್ಯ ಶಿಕ್ಷಕರು ಸುತ್ತೋಲೆಯಂತೆ ನಡವಳಿಯನ್ನು ಮಾಡದೇ ಇರುವುದು

ಕಂಡು ಬಂದಿರುತ್ತದೆ. 2013-14ನೇ ಸಾಲಿನ 2ನೇ ಜೊತೆ ಬಟ್ಟೆಯನ್ನು ಆಗ ಬಿ.ಇ.ಓ. ಆಗಿದ್ದ ನೀವೇ ತರಿಸಿಕೊಟ್ಟಿರುತ್ತೀರಿ.

(ii) ಸರ್ಕಾರ ಸಂ/ಸಶಿಇ/1-8/ನೆಸಮವಸ್ತ್ರ/2013-14, ದಿ: 17/07/2013 ರಲ್ಲಿ ಸರ್ಕಾರ ಎಲ್ಲಾ 1 ರಿಂದ 8ನೇ ತರಗತಿವರೆಗೆ ವ್ಯಾಸಂಗ ಮಾಡುತ್ತಿರುವ ಪ್ರಾಥಮಿಕ ಶಾಲೆಗಳಿಗೆ 2ನೇ ಜೊತೆ ಉಚಿತ ಸಮವಸ್ತ್ರ ಖರೀದಿಸಲು ಸುತ್ತೋಲೆಯನ್ನು ಹೊರಡಿಸಿದ್ದು, ಸುತ್ತೋಲೆಯಲ್ಲಿ ಶಾಲೆಯ ಎಸ್.ಡಿ.ಎಂ.ಸಿ.ಯವರು ಬಟ್ಟೆಗಳನ್ನು ದರಪಟ್ಟಿ ಮೂಲಕ ಖರೀದಿಸಲು ಆದೇಶಿಸಿರುತ್ತದೆ. ದಾಖಲಾತಿಗಳನ್ನು ಪರಿಶೀಲಿಸಲಾಗಿ ಕೆಲವು ಶಾಲೆಗಳಲ್ಲಿ ಹೆಚ್ಚಿನ ಕೊಟೇಶನ್‌ಗಳು ಜೆರಾಕ್ಸ್ ಪ್ರತಿಗಳಾಗಿದ್ದು, ಜೆರಾಕ್ಸ್ ಪ್ರತಿಗಳ ಮೇಲೆ ಮೊಹರಿನೊಂದಿಗೆ ಸಹಿ ಮಾಡಿರುವುದು ಕಂಡು ಬಂದಿರುತ್ತದೆ. ಕೆಲವು ಕೊಟೇಷನ್‌ಗಳಲ್ಲಿ ದಿನಾಂಕಗಳನ್ನು ಮತ್ತು ಶಾಲೆಗಳ ವಿಳಾಸಗಳನ್ನು ನಮೂದಿಸಿರುವುದಿಲ್ಲ. ಶಾಲೆಯಲ್ಲಿ ಎಸ್.ಡಿ.ಎಂ.ಸಿ. ಮೂಲಕ ಯಾರೂ ಸಹ ಕೊಟೇಷನ್‌ಗಳನ್ನು ಕಾಲ್ ಮಾಡಿರುವುದು ಕಂಡು ಬಂದಿರುವುದಿಲ್ಲ. ಸುತ್ತೋಲೆಯನ್ನು ಮೇಲಾಧಿಕಾರಿಗಳು ತಾಲ್ಲೂಕಿನ ಸಂಬಂಧಪಟ್ಟ ಸಿ.ಆರ್.ಪಿ.ಗಳಿಗೆ ಮತ್ತು ಶಾಲೆಗಳ ಮುಖ್ಯೋಪಾಧ್ಯಾಯರುಗಳಿಗೆ ವಿತರಣೆಯಾಗದೇ ಇರುವುದರಿಂದ ಎಲ್ಲಾ ಶಾಲೆಗಳಲ್ಲಿ ಕಳೆದ ಬಾರಿ ಸರ್ಕಾರದಿಂದ ಬಂದ ರೀತಿಯಲ್ಲಿಯೇ ಇರಬಹುದೆಂದು ತಿಳಿದು ಬಟ್ಟೆಗಳನ್ನು ವಿತರಣೆ ಮಾಡಿರುವುದಾಗಿ ಕಂಡು ಬಂದಿರುತ್ತದೆ. ಸಾಕ್ಷಿದಾರರ ಹೇಳಿಕೆಗಳಿಂದ ಆ.ಸ.ನೌಕರರಾದ ನೀವೇ ಬಟ್ಟೆಗಳನ್ನು ಮೌಖಿಕವಾಗಿ ಇಂಡೆಂಟ್ ಮಾಡಿ ತರಿಸಿದಂತೆ ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

(iii) ಕುಮಾರ್.ಎಲ್, ಶ್ರೀ ಕಿರಣ್‌ಕುಮಾರ್ ಹಾಗೂ ಜೆ.ಇ.ಸೋಮಶೇಖರ್, ಬಿ.ಆರ್.ಪಿ. ಇವರುಗಳ ಹೇಳಿಕೆಗಳಿಂದ ಶ್ರೀ ರಾಜೇಗೌಡ ರವರು ಬಿ.ಆರ್.ಪಿ. ಮತ್ತು ಸಿ.ಆರ್.ಪಿ.ಗಳ ವರ್ಗಾವಣೆ ಸ್ಥಳ ನಿಯುಕ್ತಿಗೊಳಿಸಿಕೊಡಲು ಅವರಿಗೆ ಆಪ್ತರಾದ ಮಲಿಯಪ್ಪ, ಸಿ.ಆರ್.ಪಿ.ರವರ ಮೂಲಕ ಲಂಚದ ಹಣಕ್ಕೆ ಬೇಡಿಕೆ

ಇಟ್ಟಿರುತ್ತೀರೆಂದು ಸಾಕ್ಷಿದಾರರುಗಳ ಹೇಳಿಕೆಗಳಿಂದ ಮೇಲ್ನೋಟಕ್ಕೆ ಕಂಡು ಬಂದಿರುತ್ತದೆ.

(iv) ಶಿಕ್ಷಕರಾದ ಶ್ರೀ ಬಸವಕುಮಾರ್, ಸ್ವಾಮಿ, ನಂಜುಂಡಪ್ಪ, ನಡಾಫ್, ಜಗದೀಶ್, ಬಸವರಾಜ್ ಮತ್ತು ಅಶೋಕ್.ವಿ.ಕೆ. ಇವರುಗಳ ಹೇಳಿಕೆಗಳಿಂದ ಶ್ರೀ ರಾಜೇಗೌಡ ಇವರು ನಿರ್ವಹಣಾ ಭತ್ಯೆಯ ಬಾಬ್ತು ಎಲ್ಲಾ ಸಿ.ಆರ್.ಪಿ.ಗಳಿಂದ ತಲಾ ರೂ.1000/- ಹಣವನ್ನು ರೇವಣ್ಣಗೌಡ, ಸಿ.ಆರ್.ಪಿ.ರವರ ಮೂಲಕ ಪಡೆದುಕೊಂಡಿರುತ್ತೀರೆಂದು ಕಂಡು ಬಂದಿರುತ್ತದೆ.

(v) ಶ್ರೀ ಮೂಡಲಗಿರಿಯಪ್ಪ, ಸ್ವಾಮಿ, ನಂಜುಂಡಪ್ಪ, ನಡಾಫ್ ಮತ್ತು ಬಸವರಾಜು ಇವರುಗಳನ್ನು ವಿಚಾರ ಮಾಡಿದಾಗ, ಪ್ರತಿಭಾ ಕಾರಂಜಿಗೆ ಸಿ.ಆರ್.ಪಿ.ಗಳು ಖರ್ಚು ಮಾಡಿದ ಬಾಬ್ತು ಹಣವನ್ನು ಮಂಜೂರು ಮಾಡಿಕೊಟ್ಟು, ಆ ಬಾಬ್ತು ತಲಾ ರೂ.1,000/- ವನ್ನು ಕೊಡುವಂತೆ ಸಿ.ಆರ್.ಪಿ.ಗಳಿಗೆ ಒತ್ತಾಯ ಮಾಡಿ ರೇವಣ್ಣಗೌಡ, ಸಿ.ಆರ್.ಪಿ.ರವರ ಮೂಲಕ ಹಣ ಪಡೆದುಕೊಂಡಿರುತ್ತೀರಿ.

(vi) ಆ.ಸ.ನೌಕರರಾದ ನೀವು ಮಾರ್ಗದರ್ಶಿ ಸೂತ್ರದ ಕ್ರ.ಸಂ.2.6 ರ ಆದೇಶದಂತೆ ಸಾದಿಲ್ವಾರು ಮೊತ್ತವನ್ನು ಸಮೀಕ್ಷೆಗೆ 3 ದಿನ ಮುಂಚಿತವಾಗಿ ನೀಡಬೇಕಾಗಿದ್ದು, ಗಣಕೀಕಾರ್ಯ ಮುಗಿದು ಸುಮಾರು ಒಂದು ತಿಂಗಳು ತಡವಾಗಿ ಸಂಭಾವನೆಯನ್ನು ಬ್ಯಾಂಕ್‌ಗೆ ಜಮಾ ಮಾಡಿರುತ್ತೀರಿ.

(vii) ಆ.ಸ.ನೌಕರರಾದ ನೀವು ಶಾಲೆಗಳ ಮಾನ್ಯತೆ ನವೀಕರಣ ಸಮಯದಲ್ಲಿ ಗಿಫ್ಟ್ ರೂಪದಲ್ಲಿ ಲಂಚದ ಹಣವನ್ನು ಪಡೆದಿರುತ್ತೀರಿ.

(viii) ಶ್ರೀಮತಿ ಕೆ.ವಿನುತ ರವರು ದಿ: 30/05/13 ರ ದಿ: 1/6/2013 ರಿಂದ ವೇತನರಹಿತ ರಜೆಯನ್ನು ಮತ್ತು ವಿದೇಶಕ್ಕೆ ಹೋಗಲು ಅನುಮತಿಯನ್ನು ಸಹ ನೀಡುವಂತೆ ಕೋರಿ ಅರ್ಜಿ ಸಲ್ಲಿಸಿಕೊಂಡಿದ್ದು, ಡಿ.ಡಿ.ಪಿ.ಐ. ಚಿಕ್ಕಮಗಳೂರು ರವರು ವಿದೇಶಕ್ಕೆ ತೆರಳುವ ಸಂಬಂಧ ಪ್ರತ್ಯೇಕ ಪ್ರಸ್ತಾವನೆ

ಸಲ್ಲಿಸುವಂತೆ ತಿಳಿಸಿದ್ದರೂ ಸಹ ಆ.ಸ.ನೌಕರರಾದ ನೀವು ಶ್ರೀಮತಿ ವಿನುತ ರವರಿಗೆ 1/6/2013 ರಿಂದ 30/05/2014 ರವರೆಗೆ ವೇತನರಹಿತ ರಜೆ ಮಂಜೂರು ಮಾಡಿರುತ್ತೀರಿ. ಅದನ್ನು ಗಮನಿಸಿದರೆ ಆ.ಸ.ನೌಕರರಾದ ನೀವು ನಿಮ್ಮ ಆದ್ಯ ಕರ್ತವ್ಯಗಳನ್ನು ದುರ್ಬಳಕೆ ಮಾಡಿಕೊಂಡಿರುತ್ತೀರೆಂದು ಕಂಡು ಬಂದಿರುತ್ತದೆ.

(ix) ಆ.ಸ.ನೌಕರರಾದ ನಿಮಗೆ ಡಿ.ಡಿ.ಪಿ.ಐ. ರವರು ದಿ: 01/08/2015 ರಂದು ರಾಜು.ಬಿ.ಹೆಚ್.ರವರನ್ನು ಚಿಕ್ಕಮಗಳೂರಿನಿಂದ ಮೂಡಿಗೆರೆಗೆ ವರ್ಗಾವಣೆ ಆದೇಶ ಮಾಡಿ ಕೂಡಲೇ ಬಿಡುಗಡೆಗೊಳಿಸುವಂತೆ ಆದೇಶಿಸಿದ್ದರೂ, ರಾಜುರವರನ್ನು ಕರ್ತವ್ಯದಿಂದ ಬಿಡುಗಡೆಗೊಳಿಸಿ ಚಾಲನಾ ಆದೇಶವನ್ನು ನೀಡಲು ಸುಮಾರು 8 ತಿಂಗಳು ಕಾಲಾವಕಾಶ ತೆಗೆದುಕೊಂಡು ದಿ: 31/3/2015 ರಂದು ಚಾಲನಾ ಆದೇಶವನ್ನು ನೀಡಿದ್ದು, ಇಲಾಖಾ ಮೇಲಾಧಿಕಾರಿಗಳ ಆದೇಶವನ್ನು ಉಲ್ಲಂಘಿಸಿರುತ್ತೀರಿ.

(x) 2014ನೇ ಸಾಲಿನ ಶಿಕ್ಷಕರ ದಿನಾಚರಣೆಗೆ ಸರ್ಕಾರದಿಂದ ರೂ.10,000/- ಹಣ ಮಂಜೂರಾಗಿದ್ದು, ಅಲ್ಲದೆ ವಿವಿಧ ಬ್ಯಾಂಕುಗಳಿಂದ ರೂ.40,000/- ವಂತಿಗೆ ಹಣ ಬಂದಿದ್ದು, ಇದರಲ್ಲಿ ಸರ್ಕಾರದಿಂದ ಬಂದ ರೂ.10,000/- ಗಳ ಬಗ್ಗೆ ಯಾವುದೇ ದಾಖಲೆ ಇರುವುದಿಲ್ಲ. ಶಿಕ್ಷಕರುಗಳ ಹೇಳಿಕೆಗಳಿಂದ ಆ.ಸ.ನೌಕರರಾದ ನೀವು ಶಿಕ್ಷಕರ ದಿನಾಚರಣೆಗೆಂದು ಹಣ ಸಂಗ್ರಹಣೆ ಮಾಡಿರುವುದು ಕಂಡು ಬಂದಿರುತ್ತದೆ.

(xi) ಆ.ಸ.ನೌಕರರಾದ ನೀವು ಶಿಕ್ಷಕರ ಮಾಹಿತಿಯನ್ನು ಹೆಚ್.ಆರ್.ಎಂ.ಎಸ್.ನಲ್ಲಿ ಅಳವಡಿಸಲು ಕೊಟೇಷನ್‌ಗಳನ್ನು ಕಾಲ್ ಮಾಡದೆ ಎಸ್.ಡಿ.ಎಂ. ಕಂಪ್ಯೂಟರ್ಸ್ ರವರಿಂದ ಕಮಿಷನ್ ಪಡೆದು ಬೋಗಸ್ ಕೊಟೇಷನ್ ಸೃಷ್ಟಿಸಿಕೊಂಡಿರುತ್ತೀರಿ. ಆದ್ದರಿಂದ ಯೋಜನೆಗಳು ವಿಫಲವಾಗುವುದಕ್ಕೆ ಕಾರಣರಾಗಿರುತ್ತೀರಿ.

ಆದಕಾರಣ ಆಪಾದಿತ ಸರ್ಕಾರಿ ನೌಕರರಾದ ನೀವು ಸರ್ಕಾರಿ ಸೇವಕರಾಗಿದ್ದು, ನಿಮ್ಮ ಕರ್ತವ್ಯ ಪಾಲನೆಯಲ್ಲಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆಯನ್ನು ತೋರಿಸದೆ ಸ್ವಂತ ಲಾಭಕ್ಕಾಗಿ ಸಾರ್ವಜನಿಕ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿದ್ದು, ಆಪಾದಿತ ಸರ್ಕಾರಿ ನೌಕರರಾದ ನೀವು ಕರ್ನಾಟಕ ಸರ್ಕಾರಿ ಸೇವಾ (ನಡತೆ) ನಿಯಮಾವಳಿ 1966ರ ನಿಯಮ (3)(1) (ii) ಮತ್ತು (iii)ನೇ ನಿಬಂಧನೆಯನ್ನು ಉಲ್ಲಂಘಿಸಿ ದುರ್ನಡತೆ ಎಸಗಿದ್ದೀರಿ.

## ಅನುಬಂಧ-2

## ದೋಷಾರೋಪಣೆಯ ವಿವರ

(ಸ್ಟೇಟ್‌ಮೆಂಟ್ ಆಫ್ ಇಂಪ್ಯೂಟೇಷನ್ ಆಫ್ ಮಿಸ್‌ಕಾಂಡೆಕ್ಟ್)

2. ದೂರುದಾರರು ತಮ್ಮ ದೂರಿನಲ್ಲಿ ಆ.ಸ.ನೌಕರರು ಅಕ್ರಮ ಹಣ ವಸೂಲಿ ಹಾಗೂ ಅಧಿಕಾರ ದುರ್ಬಳಕೆ ಮತ್ತು ಮಾನಸಿಕ ಕಿರುಕುಳ ನೀಡುವುದು ಹಾಗೂ ಹಲವಾರು ರೀತಿಯ ಅವ್ಯವಹಾರಗಳನ್ನು ನಡೆಸಿದ್ದು, ಆ ಬಗ್ಗೆ ವಿಚಾರಣೆ ನಡೆಸಿ ಶಿಸ್ತು ಕ್ರಮ ಜರುಗಿಸಲು ಕೋರಿ ದೂರನ್ನು ಸಲ್ಲಿಸಿರುತ್ತಾರೆ.

3. ದೂರುದಾರರ ದೂರಿನ ಬಗ್ಗೆ ತನಿಖೆ ನಡೆಸಿ ವರದಿಯನ್ನು ಸಲ್ಲಿಸುವಂತೆ ಪೊಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಚಿಕ್ಕಮಗಳೂರು ಇವರಿಗೆ ಆದೇಶಿಸಲಾಗಿತ್ತು. ಪೊಲೀಸ್ ಉಪಾಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಚಿಕ್ಕಮಗಳೂರು ಇವರು ವರದಿಯನ್ನು ಸಲ್ಲಿಸಿದ್ದು, ಅವರು ಈ ಕೆಳಗಿನಂತೆ ವರದಿಯನ್ನು ನೀಡಿರುತ್ತಾರೆ.

   a. 2013-14ನೇ ಸಾಲಿನ 2ನೇ ಜೊತೆ ಬಟ್ಟೆಯನ್ನು ಖರೀದಿಸುವ ಬಗ್ಗೆ ಸರ್ಕಾರದಿಂದ ಹೊರಡಿಸಿರುವ ಸುತ್ತೋಲೆಯನ್ನು ಸಿ.ಆರ್.ಪಿ.ಗಳಿಗೆ ಮತ್ತು ಶಾಲೆಗಳ ಮುಖ್ಯ ಶಿಕ್ಷಕರುಗಳಿಗೆ ವಿತರಿಸದೇ ಇರುವುದರಿಂದ, ಶಾಲೆಯ ಮುಖ್ಯ ಶಿಕ್ಷಕರು ಸುತ್ತೋಲೆಯಂತೆ ನಡವಳಿಯನ್ನು ಮಾಡದೇ ಇರುವುದು ಕಂಡು ಬಂದಿರುತ್ತದೆ. 2013-14ನೇ ಸಾಲಿನ 2ನೇ ಜೊತೆ ಬಟ್ಟೆಯನ್ನು ಆಗ ಬಿ.ಇ.ಓ. ಆಗಿದ್ದ ಆ.ಸ.ನೌಕರರೇ ತರಿಸಿಕೊಟ್ಟಿರಬಹುದೆಂದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

b. ಸರ್ಕಾರ ಸಂ/ಸಶಿಇ/1-8/ನೆಸಮವಸ್ತ್ರ/2013-14, ದಿ: 17/07/2013 ರಲ್ಲಿ ಸರ್ಕಾರ ಎಲ್ಲಾ 1 ರಿಂದ 8ನೇ ತರಗತಿವರೆಗೆ ವ್ಯಾಸಂಗ ಮಾಡುತ್ತಿರುವ ಪ್ರಾಥಮಿಕ ಶಾಲೆಗಳಿಗೆ 2ನೇ ಜೊತೆ ಉಚಿತ ಸಮವಸ್ತ್ರ ಖರೀದಿಸಲು ಸುತ್ತೋಲೆಯನ್ನು ಹೊರಡಿಸಿದ್ದು, ಸುತ್ತೋಲೆಯಲ್ಲಿ ಶಾಲೆಯ ಎಸ್.ಡಿ.ಎಂ.ಸಿ.ಯವರು ಬಟ್ಟೆಗಳನ್ನು ದರಪಟ್ಟಿ ಮೂಲಕ ಖರೀದಿಸಲು ಆದೇಶಿಸಿರುತ್ತದೆ. ದಾಖಲಾತಿಗಳನ್ನು ಪರಿಶೀಲಿಸಲಾಗಿ ಕೆಲವು ಶಾಲೆಗಳಲ್ಲಿ ಹೆಚ್ಚಿನ ಕೊಟೇಶನ್‌ಗಳು ಜೆರಾಕ್ಸ್ ಪ್ರತಿಗಳಾಗಿದದು, ಜೆರಾಕ್ಸ್ ಪ್ರತಿಗಳ ಮೇಲೆ ಮೊಹರಿನೊಂದಿಗೆ ಸಹಿ ಮಾಡಿರುವುದು ಕಂಡು ಬಂದಿರರುತ್ತದೆ. ಕೆಲವು ಕೊಟೇಷನ್‌ಗಳಲ್ಲಿ ದಿನಾಂಕಗಳನ್ನು ಮತ್ತು ಶಾಲೆಗಳ ವಿಳಾಸಗಳನ್ನು ನಮೂದಿಸಿರುವುದಿಲ್ಲ. ಶಾಲೆಯಲ್ಲಿ ಎಸ್.ಡಿ.ಎಂ.ಸಿ. ಮೂಲಕ ಯಾರೂ ಸಹ ಕೊಟೇಷನ್‌ಗಳನ್ನು ಕಾಲ್ ಮಾಡಿರುವುದು ಕಂಡು ಬಂದಿರುವುದಿಲ್ಲ. ಸುತ್ತೋಲೆಯನ್ನು ಮೇಲಾಧಿಕಾರಿಗಳು ತಾಲ್ಲೂಕಿನ ಸಂಬಂಧಪಟ್ಟ ಸಿ.ಆರ್.ಪಿ.ಗಳಿಗೆ ಮತ್ತು ಶಾಲೆಗಳ ಮುಖ್ಯೋಪಾಧ್ಯಾಯರುಗಳಿಗೆ ವಿತರಣೆಯಾಗದೇ ಇರುವುದರಿಂದ ಎಲ್ಲಾ ಶಾಲೆಗಳಲ್ಲಿ ಕಳೆದ ಬಾರಿ ಸರ್ಕಾರದಿಂದ ಬಂದ ರೀತಿಯಲ್ಲಿಯೇ ಇರಬಹುದೆಂದು ತಿಳಿದು ಬಟ್ಟೆಗಳನ್ನು ವಿತರಣೆ ಮಾಡಿರುವುದಾಗಿ ಕಂಡು ಬಂದಿರುತ್ತದೆ. ಸಾಕ್ಷಿದಾರರ ಹೇಳಿಕೆಗಳಿಂದ ಆ.ಸ.ನೌಕರರೇ ಬಟ್ಟೆಗಳನ್ನು ಮೌಖಿಕವಾಗಿ ಇಂಡೆಂಟ್ ಮಾಡಿ ತರಿಸಿದಂತೆ ಮೇಲ್ನೋಟಕ್ಕೆ ಕಂಡು ಬಂದಿರುತ್ತದೆ.

c. ಕುಮಾರ್.ಎಲ್, ಶ್ರೀ ಕಿರಣ್‌ಕುಮಾರ್ ಹಾಗೂ ಜೆ.ಇ.ಸೋಮಶೇಖರ್, ಬಿ.ಆರ್.ಪಿ. ಇವರುಗಳ ಹೇಳಿಕೆಗಳಿಂದ ಶ್ರೀ ರಾಜೇಗೌಡ ರವರು ಬಿ.ಆರ್.ಪಿ. ಮತ್ತು ಸಿ.ಆರ್.ಪಿ.ಗಳ ವರ್ಗಾವಣೆ ಸ್ಥಳ ನಿಯುಕ್ತಿಗೊಳಿಸಿಕೊಡಲು ಅವರಿಗೆ ಆಪ್ತರಾದ ಮಲಿಯಪ್ಪ, ಸಿ.ಆರ್.ಪಿ.ರವರ ಮೂಲಕ ಲಂಚದ ಹಣಕ್ಕೆ ಬೇಡಿಕೆ ಇಟ್ಟಿರುವುದು ಸಾಕ್ಷಿದಾರರುಗಳ ಹೇಳಿಕೆಗಳಿಂದ ಮೇಲ್ನೋಟಕ್ಕೆ ಕಂಡು ಬಂದಿರುತ್ತದೆ.

d. ಶಿಕ್ಷಕರಾದ ಶ್ರೀ ಬಸವಕುಮಾರ್, ಸ್ವಾಮಿ, ನಂಜುಂಡಪ್ಪ, ನಡಾಫ್, ಜಗದೀಶ್, ಬಸವರಾಜ್ ಮತ್ತು ಅಶೋಕ್.ವಿ.ಕೆ. ಇವರುಗಳ ಹೇಳಿಕೆಗಳಿಂದ ಶ್ರೀ ರಾಜೇಗೌಡ ಇವರು ನಿರ್ವಹಣಾ ಭತ್ಯೆಯ ಬಾಬ್ತು ಎಲ್ಲಾ ಸಿ.ಆರ್.ಪಿ.ಗಳಿಂದ ತಲಾ ರೂ.1000/-

ಹಣವನ್ನು ರೇವಣ್ಣಗೌಡ, ಸಿ.ಆರ್.ಪಿ.ರವರ ಮೂಲಕ ಪಡೆದುಕೊಂಡಿರುತ್ತಾರೆಂದು ಮೇಲ್ನೋಟಕ್ಕೆ ಕಂಡು ಬಂದಿರುತ್ತದೆ.

e. ಶ್ರೀ ಮೂಡಲಗಿರಿಯಪ್ಪ, ಸ್ವಾಮಿ, ನಂಜುಂಡಪ್ಪ, ನಡಾಫ್ ಮತ್ತು ಬಸವರಾಜು ಇವರುಗಳನ್ನು ವಿಚಾರ ಮಾಡಿದಾಗ, ಪ್ರತಿಭಾ ಕಾರಂಜಿಗೆ ಸಿ.ಆರ್.ಪಿ.ಗಳು ಖರ್ಚು ಮಾಡಿದ ಬಾಬ್ತು ಹಣವನ್ನು ಮಂಜೂರು ಮಾಡಿಕೊಟ್ಟು, ಆ ಬಾಬ್ತು ತಲಾ ರೂ.1,000/- ವನ್ನು ಕೊಡುವಂತೆ ಸಿ.ಆರ್.ಪಿ.ಗಳಿಗೆ ಒತ್ತಾಯ ಮಾಡಿ ರೇವಣ್ಣಗೌಡ, ಸಿ.ಆರ್.ಪಿ.ರವರ ಮೂಲಕ ಹಣ ಪಡೆದುಕೊಂಡಿರುವುದು ಮೇಲ್ನೋಟಕ್ಕೆ ಕಂಡು ಬಂದಿರುತ್ತದೆ.

f. ಮಾರ್ಗದರ್ಶಿ ಸೂತ್ರದ ಕ್ರ.ಸಂ.2.6 ರ ಆದೇಶದಂತೆ ಸಾದಿಲ್ವಾರು ಮೊತ್ತವನ್ನು ಸಮೀಕ್ಷೆಗೆ 3 ದಿನ ಮುಂಚಿತವಾಗಿ ನೀಡಬೇಕಾಗಿದ್ದು, ಗಣಕೀಕಾರ್ಯ ಮುಗಿದು ಸುಮಾರು ಒಂದು ತಿಂಗಳು ತಡವಾಗಿ ಸಂಭಾವನೆಯನ್ನು ಬ್ಯಾಂಕ್‌ಗೆ ಜಮಾ ಮಾಡಿರುವುದು ಕಂಡು ಬಂದಿರುತ್ತದೆ.

g. ಶಾಲೆಗಳ ಮಾನ್ಯತೆ ನವೀಕರಣ ಸಮಯದಲ್ಲಿ ಗಿಫ್ಟ್ ರೂಪದಲ್ಲಿ ಆ.ಸ.ನೌಕರರು ಲಂಚದ ಹಣವನ್ನು ಪಡೆದಿರುತ್ತಾರೆಂದು ಮೇಲ್ನೋಟಕ್ಕೆ ಕಂಡು ಬರುತ್ತದೆ.

h. ಶ್ರೀಮತಿ ಕೆ.ವಿನುತ ರವರು ದಿ: 30/05/13 ರ ದಿ: 1/6/2013 ರಿಂದ ವೇತನರಹಿತ ರಜೆಯನ್ನು ಮತ್ತು ವಿದೇಶಕ್ಕೆ ಹೋಗಲು ಅನುಮತಿಯನ್ನು ಸಹ ನೀಡುವಂತೆ ಕೋರಿ ಅರ್ಜಿ ಸಲ್ಲಿಸಿಕೊಂಡಿದ್ದು, ಡಿ.ಡಿ.ಪಿ.ಐ. ಚಿಕ್ಕಮಗಳೂರು ರವರು ವಿದೇಶಕ್ಕೆ ತೆರಳುವ ಸಂಬಂಧ ಪ್ರತ್ಯೇಕ ಪ್ರಸ್ತಾವನೆ ಸಲ್ಲಿಸುವಂತೆ ಬಿ.ಇ.ಓ.ರವರಿಗೆ ತಿಳಿಸಿದ್ದರೂ ಸಹ ಆ.ಸ.ನೌಕರರು ಶ್ರೀಮತಿ ವಿನುತ ರವರಿಗೆ 1/6/2013 ರಿಂದ 30/05/2014 ರವರೆಗೆ ವೇತನರಹಿತ ರಜೆ ಮಂಜೂರು ಮಾಡಿರುತ್ತಾರೆ. ಅದನ್ನು ಗಮನಿಸಿದರೆ ಆ.ಸ.ನೌಕರರು ತಮ್ಮ ಆದ್ಯ ಕರ್ತವ್ಯಗಳನ್ನು ದುರ್ಬಳಕೆ ಮಾಡಿಕೊಂಡಿರುವುದು ಕಂಡು ಬಂದಿರುತ್ತದೆ.

i. ಡಿ.ಡಿ.ಪಿ.ಐ. ರವರು ದಿ: 01/08/2015 ರಂದು ರಾಜು.ಬಿ.ಹೆಚ್.ರವರನ್ನು ಚಿಕ್ಕಮಗಳೂರಿನಿಂದ ಮೂಡಿಗೆರೆಗೆ ವರ್ಗಾವಣೆ ಆದೇಶ ಮಾಡಿ ಕೂಡಲೇ ಬಿಡುಗಡೆಗೊಳಿಸುವಂತೆ ಆದೇಶಿಸಿದ್ದರೂ ಆ.ಸ.ನೌಕರರು ರಾಜುರವರನ್ನು

ಕರ್ತವ್ಯದಿಂದ ಬಿಡುಗಡೆಗೊಳಿಸಿ ಚಾಲನಾ ಆದೇಶವನ್ನು ನೀಡಲು ಸುಮಾರು 8 ತಿಂಗಳು ಕಾಲಾವಕಾಶ ತೆಗೆದುಕೊಂಡು ದಿ: 31/3/2015 ರಂದು ಚಾಲನಾ ಆದೇಶವನ್ನು ನೀಡಿದ್ದು, ಇಲಾಖಾ ಮೇಲಾಧಿಕಾರಿಗಳ ಆದೇಶವನ್ನು ಉಲ್ಲಂಘಿಸಿದಂತೆ ಕಂಡು ಬಂದಿರುತ್ತದೆ.

j. 2014ನೇ ಸಾಲಿನ ಶಿಕ್ಷಕರ ದಿನಾಚರಣೆಗೆ ಸರ್ಕಾರದಿಂದ ರೂ.10,000/- ಹಣ ಮಂಜೂರಾಗಿದ್ದು, ಅಲ್ಲದೆ ವಿವಿಧ ಬ್ಯಾಂಕುಗಳಿಂದ ರೂ.40,000/- ವಂತಿಗೆ ಹಣ ಬಂದಿದ್ದು, ಇದರಲ್ಲಿ ಸರ್ಕಾರದಿಂದ ಬಂದ ರೂ.10,000/- ಗಳ ಬಗ್ಗೆ ಯಾವುದೇ ದಾಖಲೆ ಇರುವುದಿಲ್ಲ. ಶಿಕ್ಷಕರುಗಳ ಹೇಳಿಕೆಗಳಿಂದ ಆ.ಸ.ನೌಕರರು ಶಿಕ್ಷಕರ ದಿನಾಚರಣೆಗೆಂದು ಹಣ ಸಂಗ್ರಹಣೆ ಮಾಡಿರುವುದು ಮೇಲ್ನೋಟಕ್ಕೆ ಕಂಡು ಬಂದಿರುತ್ತದೆ.

k. ಶಿಕ್ಷಕರ ಮಾಹಿತಿಯನ್ನು ಹೆಚ್.ಆರ್.ಎಂ.ಎಸ್.ನಲ್ಲಿ ಅಳವಡಿಸಲು ಕೊಟೇಷನ್‌ಗಳನ್ನು ಕಾಲ್ ಮಾಡದೆ ಎಸ್.ಡಿ.ಎಂ. ಕಂಪ್ಯೂಟರ್ಸ್ ರವರಿಂದ ಕಮಿಷನ್ ಪಡೆದು ಬೋಗಸ್ ಕೊಟೇಷನ್ ಸೃಷ್ಟಿಸಿಕೊಂಡಿರುವುದು ಕಂಡು ಬಂದಿರುತ್ತದೆಂದು ಹೇಳಿರುತ್ತಾರೆ.

4. ತನಿಖಾಧಿಕಾರಿಯ ವರದಿಯ ಮೇಲೆ ಆ.ಸ.ನೌಕರರು ಆಕ್ಷೇಪಣೆಯನ್ನು ಸಲ್ಲಿಸಿದ್ದು, ತನ್ನ ಆಕ್ಷೇಪಣೆಯಲ್ಲಿ 2013-14ನೇ ಸಾಲಿಗೆ ಸಂಬಂಧಿಸಿದಂತೆ ಸುತ್ತೋಲೆಯಂತೆ ಕ್ರಮ ವಹಿಸಲು ಸೂಚಿಸಿರುತ್ತೇನೆ. ಇಂತಹುದೇ ಸಂಸ್ಥೆಯಿಂದ ಖರೀದಿಸುವಂತೆ ಲಿಖಿತವಾಗಿಯಾಗಲೀ ಅಥವಾ ಮೌಖಿಕವಾಗಿಯಾಗಲೀ ಸೂಚನೆ ನೀಡಿರುವುದಿಲ್ಲ. ಎಸ್.ಎಸ್.ಎ.ಯ 2ನೇ ಸಮವಸ್ತ್ರ ವಿತರಣೆ ಮೇಲ್ವಿಚಾರಣೆಯನ್ನು ನಿರ್ವಹಿಸುವ ಜವಾಬ್ದಾರಿ ತಾಲ್ಲೂಕು ಡಿ.ಆರ್.ಸಿ. ಕೇಂದ್ರದ ಸಮನ್ವಯಾಧಿಕಾರಿಯದ್ದಾಗಿರುತ್ತದೆ. 8 ಜನ ಸಿ.ಆರ್.ಪಿ.ಗಳು ಮಾತ್ರ ದುರುದ್ದೇಶದಿಂದ ಅವರ ಮೇಲೆ ಆರೋಪ ಮಾಡಿರುತ್ತಾರೆ. ಅವಧಿ ಮೀರಿದ ಸಿ.ಆರ್.ಪಿ.ಗಳ ಸ್ಥಳ ನಿಯುಕ್ತಿಗೆ ಲಂಚ ಪಡೆದಿರುತ್ತಾರೆನ್ನುವ ದೂರು ಸುಳ್ಳಿನಿಂದ ಕೂಡಿರುತ್ತದೆ. ಆ ಬಗ್ಗೆ ಸಿ.ಆರ್.ಪಿ.ಗಳು ಹಿಂದಿನ ಇಲಾಖಾ ವಿಚಾರಣೆ ವೇಳೆ ಮತ್ತು ನ್ಯಾಯಾಲಯಕ್ಕೆ ಸಲ್ಲಿಸಿರುವ ಅಫಿಡವಿಟ್‌ನಲ್ಲಿ ಲಿಖಿತ ಹೇಳಿಕೆ ನೀಡಿರುತ್ತಾರೆ.

5. ಸೋಮಶೇಖರ್, ಬಿ.ಆರ್.ಪಿ.ರವರು ಸಲ್ಲಿಸಿರುವ ಸಿ.ಡಿ. ಸಂಭಾಷಣೆ ವಾಸ್ತವವಾಗಿರುವುದಿಲ್ಲ. ವಿವಿಧ ಸಂದರ್ಭಗಳ ಮಾತುಗಳನ್ನು ಜೋಡಿಸಿ ಸಂಭಾಷಣೆ ರೂಪದಲ್ಲಿ ಸಿ.ಡಿ.ಯನ್ನು ತಯಾರಿಸಿರುತ್ತಾರೆ. ಸ್ಥಳ ನಿಯುಕ್ತಿ ಪ್ರಾಧಿಕಾರ ಡಿ.ಡಿ.ಪಿ.ಐ.ರವರದ್ದಾಗಿದ್ದು, ಅವರೇ ಕೌನ್ಸೆಲಿಂಗ್ ಮೂಲಕ ಸ್ಥಳ ನಿಯುಕ್ತಿಗೊಳಿಸಿರುತ್ತಾರೆ. ಸಾದಿಲ್ವಾರು ಬಾಬ್ತಿನ ಮೊತ್ತವನ್ನು ನೇರವಾಗಿ ಬ್ಯಾಂಕ್ ಖಾತೆಗೆ ಬಿ.ಆರ್.ಪಿ. ಮತ್ತು ಸಿ.ಆರ್.ಪಿ.ಗಳ ಜಂಟಿ ಸಹಿಯೊಂದಿಗೆ ಜಮಾ ಮಾಡಲಾಗಿದೆ. ಪ್ರತಿಭಾ ಕಾರಂಜಿಗೆ ಬಿಡುಗಡೆಯಾದ ಮೊತ್ತವನ್ನು ನೇರವಾಗಿ ಸಿ.ಆರ್.ಪಿ.ಗಳ ಖಾತೆಗೆ ಬ್ಯಾಂಕ್ ಮೂಲಕ ಜಮಾ ಮಾಡಲಾಗಿದೆ. ಹಾಗೂ ಅದರ ಖರ್ಚು ಭರಿಸಿ ವೋಚರ್ ನಿರ್ವಹಿಸಿರುತ್ತಾರೆ. ಆಡಿಟ್ ಕೂಡ ನಡೆದಿದ್ದು, ನಿಯಮಾನುಸಾರ ಖರ್ಚು ಭರಿಸಲಾಗಿದೆಯೆಂದು ಆಡಿಟ್‌ನಲ್ಲಿ ಉಲ್ಲೇಖಿಸಲಾಗಿದೆ. ಮಾನ್ಯತೆ ನವೀಕರಣಕ್ಕಾಗಿ ಗಿಫ್ಟ್ ಪಡೆದಿರುತ್ತಾರೆಂಬ ಆರೋಪ ಸುಳ್ಳಾಗಿರುತ್ತದೆ. ಶ್ರೀಮತಿ.ವಿನುತ ರವರಿಗೆ ಮಾನ್ಯ ಉಪನಿರ್ದೇಶಕರ ಆದೇಶದಂತೆ ಕೆ.ಸಿ.ಎಸ್.ಆರ್. ನಿಯಮ 192ಲ ಪ್ರಕಾರ ವೇತನರಹಿತ ರಜೆ ಮಂಜೂರು ಮಾಡುವ ಅಧಿಕಾರ ಬಿ.ಇ.ಓ. ರವರಿಗೆ ಇದ್ದು, ಅದರಂತೆ ರಜೆ ಮಂಜೂರು ಮಾಡಿರುತ್ತಾರೆ. ಶ್ರೀ ರಾಜು.ವಿ.ಹೆಚ್. ರವರ ಬಿಡುಗಡೆಗೆ ಸಂಬಂಧಿಸಿದಂತೆ ಡಿ.ಡಿ.ಪಿ.ಐ. ಕಚೇರಿಯಿಂದ ದಿ: 01/08/14 ರಂದು ಬಿ.ಇ.ಓ. ಕಚೇರಿಗೆ ಕೌನ್ಸೆಲಿಂಗ್ ನಡೆಸಿದಾಗ್ಯೂ ಸದರಿ ರಾಜುರವರ ಮನವಿ ಮೇರೆಗೆ ಹಾಗೂ ಸಚಿವರ ಟಿಪ್ಪಣಿ ಮೇರೆಗೆ ಡಿ.ಡಿ.ಪಿ.ಐ. ಕಚೇರಿಯಿಂದ ಸ್ಥಳ ನಿಯುಕ್ತಿ ಆದೇಶವನ್ನು ಬಿ.ಇ.ಓ. ಕಚೇರಿಗೆ ಕಳುಹಿಸಿರುವುದಿಲ್ಲ. 2014ರ ಶಿಕ್ಷಕರ ದಿನಾಚರಣೆಗೆ ಸಂಬಂಧಪಟ್ಟಂತೆ ಒಟ್ಟು 2800 ಶಿಕ್ಷಕರಿಗೆ ಊಟದ ವ್ಯವಸ್ಥೆ, ಕಲ್ಯಾಣ ಮಂಟಪ ಬಾಡಿಗೆ, ವೇದಿಕೆಗವೆಚ್ಚ ಇತ್ಯಾದಿಗಳನ್ನು ಭರಿಸಲಾಗಿರುತ್ತದೆ. ಸಿ.ಆರ್.ಪಿ/ಬಿ.ಆರ್.ಪಿ. ಮತ್ತು ವಿವಿಧ ಶಿಕ್ಷಕರ ಸಂಘದಿಂದ ಹಣ ಕೊಡುವಂತೆ ಆದೇಶ ಮಾಡಿರುವುದಿಲ್ಲ. ಸರ್ಕಾರದಿಂದ ಮತ್ತು ಬ್ಯಾಂಕಿನಿಂದ ಬಿಡುಗಡೆಯಾದ ಹಣದ ಬಗ್ಗೆ ವೋಚರ್‌ಗಳನ್ನು ನಿರ್ವಹಿಸಲಾಗಿದೆ. ಒಂದು ಲಕ್ಷ ಮಿತಿಯೊಳಗೆ ನೇರವಾಗಿ ಕೊಟೇಷನ್ ಪಡೆಯಲು ಅವಕಾಶವಿರುತ್ತದೆ. ಕಡಿಮೆ ದರ ನಮೂದಿಸಿದ ಮತ್ತು ಟಿನ್ ನಂಬರ್ ಇರುವ ಸಂಸ್ಥೆಗೆ ಆದೇಶ ನೀಡಲಾಗಿದೆ. ಶಿಕ್ಷಕರ ನಿಯೋಜನೆಗೆ ಸಂಬಂಧಿಸಿದಂತೆ ಬಿ.ಇ.ಓ.ರವರಿಗೆ 3 ತಿಂಗಳ ಅವಧಿಯವರೆಗೆ ತಾತ್ಕಾಲಿಕ ಕಾರ್ಯಹಂಚಿಕೆ ಮಾಡಲು ಅವಕಾಶವಿರುತ್ತದೆ. ಈ ಸಂಬಂಧ 3 ತಿಂಗಳ ಅವಧಿಗೆ ಮಾತ್ರ ಶಿಕ್ಷಕರ ನಿಯೋಜನೆ ಆದೇಶ ನೀಡಿದ್ದು, ಅದರಲ್ಲಿ

ಕರ್ತವ್ಯಲೋಪ ಆಗಿರುವುದಿಲ್ಲ. ಆರೋಪಗಳಿಗೆ ಸಂಬಂಧಿಸಿದಂತೆ ಆ.ಸ.ನೌಕರರು ಕರ್ನಾಟಕ ಆಡಳಿತ ನ್ಯಾಯ ಮಂಡಳಿಗೆ ಮನವಿಯನ್ನು ಸಲ್ಲಿಸಿದ್ದು, ಆ ಸಂಬಂಧ ಅವರು ವಿವರಣೆ ಸಲ್ಲಿಸಿ ಆರೋಪಗಳು ಸುಳ್ಳೆಂದು ಮನವಿ ಮಾಡಿರುತ್ತಾರೆ. ಅವರ ಮನವಿಯನ್ನು ಅಂಗೀಕರಿಸಿ ಅಮಾನತ್ತನ್ನು ಒಂದು ತಿಂಗಳೊಳಗೆ ತೆರವುಗೊಳಿಸಲು ಆದೇಶಿಸಿರುತ್ತದೆ. ಶಿಕ್ಷಣ ಕ್ಷೇತ್ರದಲ್ಲಿ ಆ.ಸ.ನೌಕರರು ಮಾಡಿದ ಅಭಿವೃದ್ಧಿ ಕಾರ್ಯವನ್ನು ಸಹಿಸದ ಕೆಲವರು ದುರುದ್ದೇಶದಿಂದ ದೂರನ್ನು ನೀಡಿರುತ್ತಾರೆಂದು ಹೇಳಿರುತ್ತಾರೆ.

6. ತನಿಖಾಧಿಕಾರಿಯ ವರದಿಯನ್ನು ಪರಿಶೀಲಿಸಿದಾಗ, ಆ.ಸ.ನೌಕರರ ವಿರುದ್ಧ ಹಲವಾರು ಕರ್ತವ್ಯಲೋಪಗಳು ಅಂಶಗಳನ್ನು ಉಲ್ಲೇಖಿಸಿದ್ದು, ಸದರಿ ಕರ್ತವ್ಯಲೋಪಗಳನ್ನು ಅಲ್ಲಗಳೆದು ಆ.ಸ.ನೌಕರರು ಆಕ್ಷೇಪಣೆಯನ್ನು ಸಲ್ಲಿಸಿರುತ್ತಾರೆ. ಸದರಿ ಆಕ್ಷೇಪಣೆಯು ತನಿಖಾಧಿಕಾರಿಯ ವರದಿಯನ್ನು ಅಲ್ಲಗಳೆಯಲು ಸಮಂಜಸವಾಗಿರುವುದಿಲ್ಲ. ಅಲ್ಲದೆ, ಕೆಲವು ಕರ್ತವ್ಯಲೋಪಗಳ ಬಗ್ಗೆ ಇಲಾಖಾ ವಿಚಾರಣೆ ನಡೆದಿರುವ ಬಗ್ಗೆ ಆ.ಸ.ನೌಕರರು ತನ್ನ ಆಕ್ಷೇಪಣೆಯಲ್ಲಿ ಉಲ್ಲೇಖಿಸಿರುತ್ತಾರೆ. ಅದನ್ನು ಪರಿಶೀಲಿಸಿದಾಗ, ಮೇಲ್ನೋಟಕ್ಕೆ ಆ.ಸ.ನೌಕರರ ವಿರುದ್ಧ ಶಿಸ್ತುಕ್ರಮಕ್ಕೆ ಪೂರಕವಾದ ಅಂಶಗಳು ಕಂಡು ಬರುತ್ತಿದ್ದು, ಅವರ ಆಕ್ಷೇಪಣೆಯು ಅವರ ಮೇಲಿನ ಆಪಾದನೆಯನ್ನು ಅಲ್ಲಗಳೆಯಲು ಸೂಕ್ತ ಅಥವಾ ಸಮಾಧಾನಕರವಾಗಿರುವುದಿಲ್ಲ ಎಂಬ ಅಭಿಪ್ರಾಯಕ್ಕೆ ಬಂದಿದೆ. ಆ ಕಾರಣದಿಂದಾಗಿ ಆ.ಸ.ನೌಕರರು ಶಿಸ್ತುಕ್ರಮಕ್ಕೆ ಭಾದ್ಯಸ್ಥರಾಗಿರುತ್ತಾರೆ.

7. ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದುಕೊಂಡಾಗ, ಆ.ಸ.ನೌಕರರು ಸಾರ್ವಜನಿಕ/ಸರ್ಕಾರಿ ನೌಕರರಾಗಿ ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ನಿಷ್ಠೆ ಇಲ್ಲದೆ, ಕರ್ತವ್ಯಲೋಪ ಎಸಗಿ ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುತ್ತಾರೆಂದು ಮೇಲ್ನೋಟಕ್ಕೆ ಕಂಡು ಬರುತ್ತದೆ.

8. ಆ.ಸ.ನೌಕರರು ಸಾರ್ವಜನಿಕ/ಸರ್ಕಾರಿ ನೌಕರರಾಗಿದ್ದು, ತಮ್ಮ ಕರ್ತವ್ಯ ಪರಿಪಾಲನೆಯಲ್ಲಿ ನಿಷ್ಠೆಯನ್ನು ತೋರದೆ, ಕರ್ತವ್ಯಲೋಪವೆಸಗಿ, ದುರ್ವರ್ತನೆ ತೋರಿಸಿ, ಸಾರ್ವಜನಿಕ/ಸರ್ಕಾರಿ

ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ಮೇಲ್ನೋಟಕ್ಕೆ ಕಂಡು ಬರುತ್ತಿರುವುದರಿಂದ, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು, 1966 ರ ನಿಯಮ 3(1)(ii) ಮತ್ತು (iii)ರನ್ವಯ ಶಿಸ್ತುಕ್ರಮಕ್ಕೆ ಬಾಧ್ಯರಾಗಿರುತ್ತಾರೆಂದು ಕಂಡು ಬಂದಿದ್ದರಿಂದ, ಅವರ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಹಾಗೆಯೇ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14-ಎ ರ ಅಡಿಯಲ್ಲಿ, ಆ.ಸ.ನೌಕರರ ವಿರುದ್ಧ ಇಲಾಖಾ ವಿಚಾರಣೆ ಮಾಡಲು ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ ಶಿಫಾರಸ್ಸು ಮಾಡಲಾಗಿ, ಆಪಾದಿತ ಸರ್ಕಾರಿ ನೌಕರರ ವಿರುದ್ಧ ಇಲಾಖಾ ವಿಚಾರಣೆಯನ್ನು ನಡೆಸಲು ಶಿಸ್ತು ಪ್ರಾಧಿಕಾರಿಯಾದ ಸರ್ಕಾರ ಉಲ್ಲೇಖ (1) ರ ಆದೇಶದಲ್ಲಿ ಗೌರವಾನ್ವಿತ ಉಪಲೋಕಾಯುಕ್ತರವರಿಗೆ ವಹಿಸಿದ್ದು, ಗೌರವಾನ್ವಿತ ಉಪಲೋಕಾಯುಕ್ತರವರು ಅಪರ ನಿಬಂಧಕರು (ವಿಚಾರಣೆಗಳು 10) ಇವರನ್ನು ವಿಚಾರಣೆ ನಡೆಸಲು ನೇಮಕ ಮಾಡಿದ್ದಾರೆ. ಆದ್ದರಿಂದ, ನಿಮ್ಮ ವಿರುದ್ಧ ಈ ಮೇಲ್ಕಂಡ ಆಪಾದನೆ.

4. ಈ ಮೇಲ್ಕಂಡ ದೋಷಾರೋಪಣೆ (ಆರ್ಟಿಕಲ್ ಆಫ್ ಚಾರ್ಜ್) ಆ.ಸ.ನೌ ರವರಿಗೆ ಕಳುಹಿಸಿದ್ದು, ಅದು ಜಾರಿಯಾದ ನಂತರ ಆ.ಸ.ನೌ ರವರು 06.06.2017 ರಂದು ಹಾಜರಾಗಿದ್ದು, ಅವರ ಪ್ರಥಮ ಮೌಖಿಕ ಹೇಳಿಕೆಯನ್ನು ನಿಯಮ-11(9) ಕೆ.ಸಿ.ಎಸ್. ಸಿಸಿಎ ರೂಲ್ಸ್ 1957ರ ಅಡಿಯಲ್ಲಿ ದಾಖಲಿಸಲಾಗಿರುತ್ತದೆ. ಆ.ಸ.ನೌ ರವರು ತಪ್ಪೊಪ್ಪಿಕೊಳ್ಳದೆ ಆರೋಪಗಳ ವಿಚಾರಣೆಯನ್ನು ಬಯಸಿರುತ್ತಾರೆ.

5. ಆ.ಸ.ನೌ ರವರಿಗೆ ದಾಖಲೆಗಳ ಪರಿಶೀಲನೆ ಮತ್ತು ಶೋಧನೆಗಾಗಿ ಅವಕಾಶ ಕಲ್ಪಿಸಲಾಗಿರುತ್ತದೆ.

6. ಆ.ಸ.ನೌ ರವರು ತಮ್ಮ ಲಿಖಿತ ರಕ್ಷಣಾ ಹೇಳಿಕೆಯಲ್ಲಿ, ದೂರಿನಲ್ಲಿ ಆಪಾದಿಸಿರುವ ಸಂಗತಿಗಳನ್ನು ನಿರಾಕರಿಸಿರುತ್ತಾರೆ. ತಾನು ದಿನಾಂಕ 23.05.2016 ರಂದು ತನಿಖಾ ವರದಿಯ ವಿರುದ್ಧ ಸಲ್ಲಿಸಿರುವ ಆಕ್ಷೇಪಣೆಗಳು ಹಾಗೂ ದಾಖಲೆಗಳನ್ನು ಪರಿಗಣಿಸಲು ಕೋರಿರುತ್ತಾರೆ ಹಾಗೂ ಪೊಲೀಸ್ ಉಪಾಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಚಿಕ್ಕಮಗಳೂರು ರವರು ನಡೆಸಿರುವ ತನಿಖೆಯ ಏಕಪಕ್ಷೀಯವಾಗಿದ್ದು ದಾಖಲೆಗಳ ಆಧಾರಿತವಾಗಿರುವುದಿಲ್ಲವೆಂದು ದೂರುದಾರರು ದೂರಿನಲ್ಲಿ ನಮೂದಿಸಿರುವ ಅಂಶಗಳನ್ನು ಮಾತ್ರ ಪರಿಗಣಿಸಿ, ಆಪಾದಿತನಾದ ನಾನು ಸಲ್ಲಿಸಿರುವ ವಿವರಗಳನ್ನು ಹಾಗೂ ದೂರಿನಲ್ಲಿರುವ ಅಂಶಗಳ ಬಗ್ಗೆ ಇಲಾಖಾ ವತಿಯಿಂದ ನಡೆದಿರುವ ತನಿಖೆಗಳನ್ನು ಪರಿಗಣಿಸದೇ ನೀಡಿರುವ ನಿಯಮಬಾಹಿರ ವರದಿಯಾಗಿರುತ್ತದೆ ಆದಕಾರಣ ಸದರಿ ಪ್ರಕರಣದಿಂದ ದೋಷಮುಕ್ತನ್ನಾಗಿ ಮಾಡಲು ವಿನಂತಿಸಿಕೊಂಡಿರುತ್ತಾರೆ.

7. ಈ ವಿಚಾರಣೆಯಲ್ಲಿ, ಆ.ಸ.ನೌ ರವರ ವಿರುದ್ಧ ಆರೋಪಿಸಲಾದ ಆರೋಪಕ್ಕೆ ಸಂಬಂಧಿಸಿದಂತೆ, ಮಂಡನಾಧಿಕಾರಿಗಳು ತಮ್ಮ ಪರವಾಗಿ ದೂರುದಾರರಾದ ಶ್ರೀ ಕೃಷ್ಣಮೂರ್ತಿ ರವರನ್ನು ಪಿ.ಡಬ್ಲ್ಯೂ.1 ಎಂದು ಸಾಕ್ಷ್ಯ ನುಡಿಸಿಕೊಂಡು ನಿ.ಪಿ.–1 ರಿಂದ 5 ರವರೆಗೆ ಹಾಗೂ ಶ್ರೀ ಜಯಪ್ರಕಾಶ್.ಎ ಪರಿಶೀಲನಾಧಿಕಾರಿಯವರನ್ನು ಪಿ.ಡಬ್ಲ್ಯೂ.2 ಎಂದು ಸಾಕ್ಷ್ಯ ನುಡಿಸಿಕೊಂಡು, ನಿ.ಪಿ. 6 ರಿಂದ 22 ರವರೆಗಿನ ದಾಖಲೆಗಳನ್ನು ಶಿಸ್ತು ಪ್ರಾಧಿಕಾರದ ಪರವಾಗಿ ಗುರುತಿಸಿಕೊಂಡಿರುತ್ತಾರೆ. ತದನಂತರ, ಆ.ಸ.ನೌ ರವರ ದ್ವಿತೀಯ ಮೌಖಿಕ ಹೇಳಿಕೆಯನ್ನು ದಿನಾಂಕ 24.01.2019 ರಂದು ಪಡೆದುಕೊಳ್ಳಲಾಗಿರುತ್ತದೆ.

8. ಆ.ಸ.ನೌ ಶ್ರೀ **ರಾಜೇಗೌಡ** ರವರು ತಮ್ಮ ಪರವಾಗಿ ತಾವೇ **ಡಿ.ಡಬ್ಲ್ಯೂ.–1** ಎಂದು ನಿ.ಡಿ. **2** ರಿಂದ ನಿ.ಡಿ. **14** ರವರೆಗೆ ದಾಖಲೆಯನ್ನು ಗುರುತಿಸಿಕೊಂಡಿರುತ್ತಾರೆ. ಶ್ರೀ **ರಾಜು,** ಶಿಕ್ಷಕರು ರವರನ್ನು **ಡಿ.ಡಬ್ಲ್ಯೂ–2** ಎಂದು **ನಿ.ಡಿ.–15** ದಾಖಲೆಯನ್ನು ಗುರುತಿಸಿಕೊಂಡಿರುತ್ತಾರೆ. ಶ್ರೀ **ಎಂ.ಎ. ರೇವಣ್ಣಗೌಡ,** ನಿವೃತ್ತ ಮುಖ್ಯ ಶಿಕ್ಷಕರವರನ್ನು **ಡಿ.ಡಬ್ಲ್ಯೂ–3** ಎಂದು, ಶ್ರೀ

ಮಲಿಯಪ್ಪ ಸಿ.ಎಂ. ಶಿಕ್ಷಕರವರನ್ನು ಡಿ.ಡಬ್ಲ್ಯೂ-4 ಎಂದು ಹಾಗೂ ಶ್ರೀ ಪ್ರವೀಣ ಕುಮಾರ್ ಬಿ.ಜಿ. ಶಿಕ್ಷಕವರನ್ನು ಡಿ.ಡಬ್ಲ್ಯೂ.-5 ಎಂದು ಸಾಕ್ಷ್ಯ ನುಡಿಸಿಕೊಂಡಿರುತ್ತಾರೆ.

9. ಉಭಯ ಪಕ್ಷದವರ ಪರವಾಗಿ ವಾದ ವಿವಾದವನ್ನು ಮತ್ತು ಆ.ಸ.ನೌ ರವರ ಪರ ಲಿಖಿತ ವಾದವನ್ನು ಪರಿಶೀಲಿಸಲಾಯಿತು.

10. ಈ ಕೆಳಕಂಡ ಅಂಶವು ನನ್ನ ನಿರ್ಣಯಕ್ಕೆ ಉದ್ಭವಿಸಿರುತ್ತದೆ.

**ಅಂಶ–1:** ವಿಚಾರಣಾ ಪ್ರಾಧಿಕಾರವು ಆ.ಸ.ನೌ ರವರ ಮೇಲೆ ಆಪಾದಿಸಲಾದ ಆರೋಪಗಳನ್ನು ರುಜುವಾತು ಪಡಿಸಿದೆಯೇ?

**ಅಂಶ–2:** ಆದೇಶವೇನು?

11. ವಾದ ವಿವಾದದ ನಂತರ ಕಡತವನ್ನು ಪರಿಶೀಲಿಸಲಾಯಿತು ಮತ್ತು ಲಭ್ಯವಿರುವ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯವನ್ನು ಪರಿಶೀಲಿಸಲಾಯಿತು.

12. ಮೇಲ್ಕಂಡ ಪ್ರಶ್ನೆಗಳಿಗೆ ಕೆಳಗೆ ಚರ್ಚಿಸಿರುವ ಕಾರಣಗಳಿಂದ ಉತ್ತರವು ಈ ಕೆಳಕಂಡಂತಿದೆ.

**ಅಂಶ 1: ನಕರಾತ್ಮಕವಾಗಿ.**

**ಅಂಶ 2: ಅಂತಿಮ ಆದೇಶದಂತೆ**

**ಕಾರಣಗಳು:**

13. ಈ ವಿಚಾರಣೆಯಲ್ಲಿ, ಆ.ಸ.ನೌ ರವರ ವಿರುದ್ಧ ಆರೋಪಿಸಲಾದ ಆರೋಪಕ್ಕೆ ಸಂಬಂಧಿಸಿದಂತೆ, ಮಂಡನಾಧಿಕಾರಿಗಳು ತಮ್ಮ ಪರವಾಗಿ ದೂರುದಾರರಾದ ಶ್ರೀ **ಕೃಷ್ಣಮೂರ್ತಿ** ರವರನ್ನು ಪಿ.ಡಬ್ಲ್ಯೂ.1 ಎಂದು ಸಾಕ್ಷ್ಯ ನುಡಿಸಿಕೊಂಡು ನಿ.ಪಿ.–1 ರಿಂದ 5 ರವರೆಗೆ ಹಾಗೂ ಶ್ರೀ ಜಯಪ್ರಕಾಶ್.ಎ ಪರಿಶೀಲನಾಧಿಕಾರಿಯವರನ್ನು ಪಿ.ಡಬ್ಲ್ಯೂ.2 ಎಂದು ಸಾಕ್ಷ್ಯ ನುಡಿಸಿಕೊಂಡು, ನಿ.ಪಿ. 6 ರಿಂದ 22 ರವರೆಗಿನ ದಾಖಲೆಗಳನ್ನು ಶಿಸ್ತು ಪ್ರಾಧಿಕಾರದ ಪರವಾಗಿ ಗುರುತಿಸಿಕೊಂಡಿರುತ್ತಾರೆ.

14. ಆ.ಸ.ನೌ ಶ್ರೀ **ರಾಜೇಗೌಡ** ರವರು ತಮ್ಮ ಪರವಾಗಿ ತಾವೇ **ಡಿ.ಡಬ್ಲ್ಯೂ.–1** ಎಂದು ನಿ.ಡಿ. **2 ರಿಂದ** ನಿ.ಡಿ. **14** ರವರೆಗೆ ದಾಖಲೆಯನ್ನು ಗುರುತಿಸಿಕೊಂಡಿರುತ್ತಾರೆ. ಶ್ರೀ **ರಾಜು,** ಶಿಕ್ಷಕರು ರವರನ್ನು **ಡಿ.ಡಬ್ಲ್ಯೂ.–2** ಎಂದು **ನಿ.ಡಿ.–15** ದಾಖಲೆಯನ್ನು ಗುರುತಿಸಿಕೊಂಡಿರುತ್ತಾರೆ. ಶ್ರೀ **ಎಂ.ಎ. ರೇವಣ್ಣಗೌಡ,** ನಿವೃತ್ತ ಮುಖ್ಯ ಶಿಕ್ಷಕರವರನ್ನು **ಡಿ.ಡಬ್ಲ್ಯೂ.–3** ಎಂದು, ಶ್ರೀ **ಮಲಿಯಪ್ಪ** ಸಿ.ಎಂ. ಶಿಕ್ಷಕರವರನ್ನು **ಡಿ.ಡಬ್ಯೂ.–4** ಎಂದು ಹಾಗೂ ಶ್ರೀ **ಪ್ರವೀಣ ಕುಮಾರ್** ಬಿ.ಜಿ, ಶಿಕ್ಷಕವರನ್ನು **ಡಿ.ಡಬ್ಲ್ಯೂ.–5** ಎಂದು ಸಾಕ್ಷ್ಯ ನುಡಿಸಿಕೊಂಡಿರುತ್ತಾರೆ.

15. ಆ.ಸ.ನೌ ರವರ ವಿರುದ್ದ ದೋಷಾರೋಪಣೆ ಏನೆಂದರೆ; ಅಕ್ರಮ ಹಣವಸೂಲಿ, ಅಧಿಕಾರ ದುರ್ಬಳಕೆ ಮತ್ತು ಮಾನಸಿಕ ಕಿರುಕುಳ ಹಾಗೂ ಹಲವಾರು ರೀತಿಯ ಅವ್ಯವಹಾರಗಳನ್ನು ನಡೆಸಿರುತ್ತಾರೆಂದು ಆಪಾದನೆಯಿರುತ್ತದೆ.

16. PW-1 complainant Sri. **Krishnamurthy** in his evidence deposed that, he knows DGO Sri. Rajegowda, who was working as BEO in Chickmagalur. His complaint dated 06.02.2013 is

**Ex. P-1,** Form No. I (Complaint) is **Ex.P-2** and Form No.2 (affidavit) is **Ex.P-3.** PW-1 further deposed that, he made following allegation against the DGO:-

1. There are irregularities in distribution of Uniforms to the students, viz., DGO has directly purchased uniforms from Suzuki Textiles Limited by overriding powers of SDMC and Head Master.

2. DGO was deputing and transferring the teachers & Cluster Resource Persons with malafide and monitory intention.

3. DGO was recovering money from the teachers on the basis of distance from the city limits.

4. DGO was also demanding money from the teachers to issue reliving letters/movement orders.

5. DGO was also demanding money from Aided institutions for renewal of license.

6. DGO was calling cluster resource persons for meetings unnecessarily with in the span of 6 to 7 days to harass them.

7. DGO was passing the bill of salary in favor of Teacher by name Kumar who was working Elunuru Corn school and he was attending 2 days in a week and in this regard DGO received complaint.

8. DGO was demanding Rs.10,000/- from Retired Teachers for issue of NOC.

9. DGO has passed encashment of EL for Teachers without entering the same in the service register of the consign for ex:- Government Primary School, Basaravalli and Bilugola.

17. PW-1 complainant further deposed that, the Teachers Association has given complaint to Zilla Panchayath and DDPI

in this regard as per Ex. P-4 and the Copy of representation of CRP addressed to Governor and other concerned as per Ex. P-5.

18. ಪಿಡಬ್ಲ್ಯೂ-2 ಶ್ರೀ ಜಯಪ್ರಕಾಶ್, ಪರಿಶೀಲನಾಧಿಕಾರಿ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರ ಮುಖ್ಯ ವಿಚಾರಣೆಯಲ್ಲಿ, ತಾನು ತನಿಖಾಧಿಕಾರಿ ಶ್ರೀ ಶೇಖ್ ಹುಸೇನ್, ಪೊಲೀಸ್ ಉಪಾಧೀಕ್ಷಕರವರು ಸಲ್ಲಿಸಿದ್ದ ತನಿಖಾ ವರದಿ ಮತ್ತು ಅದರೊಂದಿಗಿನ ದಾಖಲಾತಿಗಳನ್ನು ಹಾಗೂ ಕಡತದಲ್ಲಿರುವ ದಾಖಲಾತಿಗಳನ್ನು ಪರಿಶೀಲಿಸಿ ಅಂತಿಮ ಪರಿಶೀಲನಾ ವರದಿ ಸಲ್ಲಿಸಿರುವುದಾಗಿ ಸಾಕ್ಷ್ಯ ನುಡಿದಿದ್ದು ನಿ.ಪಿ-6 ರಿಂದ 22 ದಾಖಲಾತಿಗಳನ್ನು ಗುರುತಿಸಿಕೊಂಡಿರುತ್ತಾರೆ

19. ಸದರಿ ಪ್ರಕರಣದ ತನಿಖಾಧಿಕಾರಿ ಶ್ರೀ ಶೇಖ್ ಹುಸೇನ್, ಪೊಲೀಸ್ ಉಪಾಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಚಿಕ್ಕಮಗಳೂರು ರವರು ಮೃತರಾಗಿರುತ್ತಾರೆ.

20. ಆ.ಸ.ನೌ-1 ರವರು ಡಿ.ಡಬ್ಲ್ಯೂ-1 ಆಗಿ ತಮ್ಮ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಾಕ್ಷ್ಯ ನುಡಿದಿರುತ್ತಾರೆ ತಾನು ದಿನಾಂಕ 23.05.2016 ರಂದು ತನಿಖಾ ವರದಿಯ ವಿರುದ್ಧ ಸಲ್ಲಿಸಿರುವ ಆಕ್ಷೇಪಣೆಗಳು ಹಾಗೂ ದಾಖಲೆಗಳನ್ನು ಪರಿಗಣಿಸಲು ಕೋರಿ ಹಾಗೂ ಪೊಲೀಸ್ ಉಪಾಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಚಿಕ್ಕಮಗಳೂರು ರವರು ನಡೆಸಿರುವ ತನಿಖೆಯ ಏಕಪಕ್ಷೀಯವಾಗಿದ್ದು ದಾಖಲೆಗಳ ಆಧಾರಿತವಾಗಿರುವುದಿಲ್ಲವೆಂದು ದೂರುದಾರರು ದೂರಿನಲ್ಲಿ ನಮೂದಿಸಿರುವ ಅಂಶಗಳನ್ನು ಮಾತ್ರ ಪರಿಗಣಿಸಿ ಪಿಡಬ್ಲ್ಯೂ-2 ರವರು ತಾನು ಸಲ್ಲಿಸಿರುವ ದಾಖಲೆಗಳನ್ನು ಪರಿಗಣಿಸದೆ ಇಲಾಖಾ ವಿಚಾರಣೆ ನಡೆಸಲು ಶಿಫಾರಸ್ಸು ಮಾಡಿರುವುದಾಗಿ ಹಾಗೂ ಈ ಬಗ್ಗೆ **ನಿ.ಡಿ-2 ರಿಂದ ನಿ.ಡಿ-15** ರವರೆಗಿನ ದಾಖಲಾತಿಗಳನ್ನು ಗುರುತಿಸಿಕೊಂಡಿರುತ್ತಾರೆ.

21. **ಡಿಡಬ್ಲ್ಯೂ–2 ರಿಂದ 4** ರವರುಗಳು ಸಹ 2013–14 ನೇ ಸಾಲಿನಲ್ಲಿ ಆಪಾದಿತ ಸರ್ಕಾರಿ ನೌಕರರು ಬಿಇಓ ಆಗಿ ಕರ್ತವ್ಯ ನಿರ್ವಹಸಿದ್ದು, ಆ ಸಮಯದಲ್ಲಿ ನಾವುಗಳು ಅಲ್ಲಿ ಕರ್ತವ್ಯ ನಿರ್ವಹಿಸಿದ್ದು, 2013–14 ನೇ ಸಾಲಿನಲ್ಲಿ ಎರಡನೇ ಜೊತೆ ಉಚಿತ ಸಮವಸ್ತ್ರ ಖರೀದಿಸಲು ಬಿಇಓ, ಬಿಆರ್‌ಪಿ ಮತ್ತು ಸಿಆರ್‌ಪಿ ರವರ ಸಭೆಯನ್ನು ಕರೆದಿದ್ದು, ಸದರಿ ಸಭೆಯಲ್ಲಿ ಸುತ್ತೋಲೆಯನ್ನು ಕೊಟ್ಟು ಶಾಲೆ ಮುಖ್ಯ ಶಿಕ್ಷಕರು ಮತ್ತು ಎಸ್‌ಡಿಎಂಸಿ ರವರು ಸಮವಸ್ತ್ರ ಖರೀದಿಸಲು ಸೂಚಿಸಿದರು. ಸದರಿಯಂತೆ ಮಲ್ಲೇನಹಳ್ಳಿ ಮುಖ್ಯ ಶಿಕ್ಷಕರು ಮತ್ತು ಶಿಕ್ಷಕರ ಸಭೆಯನ್ನು ಕರೆದು ಸುತೋಲೆಯನ್ನು ಕೊಟ್ಟು ಮುಂದಿನ ಕ್ರಮ ತೆಗೆದುಕೊಳ್ಳುವಂತೆ ಸೂಚಿಸಿದ್ದು, ಸದರಿ ಸುತ್ತೋಲೆಯಂತೆ ಮಲ್ಲೇನಹಳ್ಳಿ ಕ್ಲಸ್ಟರ್‌ನಲ್ಲಿ ಸಮವಸ್ತವನ್ನು ಖರೀದಿಸಿರುವುದಿಲ್ಲ, ಡಿಜಿಓ ರವರ ವಿರುದ್ಧ ಲಂಚದ ಬಗ್ಗೆ ಆರೋಪ ಮಾಡಿರುವುದು ತಮ್ಮ ಗಮನಕ್ಕೆ ಬಂದಿಲ್ಲ, ಮಲ್ಲಿಯಪ್ಪ, ಶಿಕ್ಷಕರು ಡಿಡಬ್ಲ್ಯೂ–4 ರವರು ಸಹ ತಾನು ಸಿಆರ್‌ಪಿ ಆಗಿ ಕರ್ತವ್ಯ ನಿರ್ವಹಿಸಿದ್ದು, ಶ್ರೀ ಕುಮಾರ್ ಎಲ್. ಶ್ರೀ ಕಿರಣ ಕುಮಾರ್ ಮತ್ತು ಜಿ.ಇ. ಸೋಮಶೇಖರ್ ರವರು ಸಿಆರ್‌ಪಿ ಮತ್ತು ಬಿಆರ್‌ಪಿ ರವರಿಗೆ ಸ್ಥಳ ನಿಯುಕ್ತಿಗೊಳಿಸಲು ಡಿಜಿಓ ರವರು ಹಣಕ್ಕೆ ಬೇಡಿಕೆ ಇಟ್ಟಿಲ್ಲ ಎಂದು ನುಡಿದಿರುತ್ತಾರೆ.

22. ಆಪಾದಿತ ಸರ್ಕಾರಿ ನೌಕರ ಶ್ರೀ ರಾಜೇಗೌಡ, ಹಿಂದಿನ ಕ್ಷೇತ್ರ ಶಿಕ್ಷಣಾಧಿಕಾರಿ, ಚಿಕ್ಕಮಗಳೂರು ರವರು ದಿನಾಂಕ 16.09.2021 ರಂದು ತಮ್ಮ ಲಿಖಿತ ವಾದದಲ್ಲಿ, ದೋಷಾರೋಪಣೆಯಲ್ಲಿ ಮಾಡಿರುವ ಎಲ್ಲಾ ಆಪಾದನೆಗಳನ್ನು ಸಂಪೂರ್ಣವಾಗಿ ಅಲ್ಲಗಳೆದಿರುತ್ತಾರೆ ಹಾಗೂ ತಾವು ನಿಯಮಬಾಹಿರವಾದ ಕೆಲಸಗಳನ್ನು ಮಾಡಿರುವುದಿಲ್ಲವೆಂದು ತಿಳಿಸಿರುತ್ತಾರೆ.

23. ಆಪಾದಿತ ಸರ್ಕಾರಿ ನೌಕರರು ತಮ್ಮ ಪರವಾಗಿ ತಮ್ಮನ್ನು ಸೇರಿ ಒಟ್ಟು 5 ಜನ ಸಾಕ್ಷಿದಾರರ ಸಾಕ್ಷ್ಯವನ್ನು ನುಡಿಸಿದ್ದು, ಡಿಡಬ್ಲ್ಯೂ–2 ರವರು ತಮ್ಮ ಸಾಕ್ಷ್ಯದಲ್ಲಿ 2013–14ನೇ ಸಾಲಿನಲ್ಲಿ ಬಟ್ಟೆ ಖರೀದಿಸುವ ಬಗ್ಗೆ ಚಿಕ್ಕಮಗಳೂರು ತಾಲ್ಲೂಕಿನ ಸಿ.ಆರ್.ಪಿ ಮತ್ತು ಶಾಲಾ ಮುಖ್ಯ ಶಿಕ್ಷಕರುಗಳಿಗೆ ಸಭೆ ಕರೆದು ಚರ್ಚಿಸಿ, ಸರ್ಕಾರಿ ಆದೇಶದಂತೆ ಸಮವಸ್ತ್ರವನ್ನು ವಿತರಿಸುವಂತೆ ಆಪಾದಿತ ಸರ್ಕಾರಿ ನೌಕರರು ಚರ್ಚಿಸಿರುವುದಾಗಿ ನುಡಿದಿರುತ್ತಾರೆ. ಆಪಾದಿತ ಸರ್ಕಾರಿ ನೌಕರರೇ ಶಾಲೆ ಸಮವಸ್ತ್ರವನ್ನು ಖರೀದಿಸಿರುವುದಿಲ್ಲವೆಂದು ನುಡಿದಿರುತ್ತಾರೆ.

24. ಡಿಡಬ್ಲ್ಯೂ–3 ಶ್ರೀ ಎಂ.ಎ. ರೇವಣ್ಣಗೌಡ ನಿವೃತ್ತ ಮುಖ್ಯ ಶಿಕ್ಷಕರು ತಮ್ಮ ಸಾಕ್ಷ್ಯದಲ್ಲಿ ತಾನು ಆಲ್ದೂರು ಕ್ಲಸ್ಟರ್ ಆಗಿ ಚಿಕ್ಕಮಗಳೂರು ತಾಲ್ಲೂಕಿನಲ್ಲಿ ಕರ್ತವ್ಯ ನಿರ್ವಹಿಸರುವುದಾಗಿ, ಪ್ರತಿಭಾ ಕಾರಂಜಿ ಚಟುವಟಿಕೆಗಾಗಿ ಪ್ರತಿ ಕ್ಲಸ್ಟರ್‌ಗೆ ಇಲಾಖೆಯಿಂದ ಹಣ ಬಿಡುಗಡೆಯಾಗುತ್ತಿತ್ತು, ಪ್ರತಿ ಕ್ಲಸ್ಟರ್‌ಗೆ ಬಿಇಒ ಮತ್ತು ಬಿಆರ್‌ಸಿ ರವರ ಜಂಟಿ ಖಾತೆಗೆ ಹಣ ವರ್ಗಾವಣೆಯಾಗುತ್ತಿತ್ತು. ನಾವು ಬಿಲ್ಮತ್ತು ಓಚರ್‌ಗಳನ್ನು ನಾವು ಕೊಟ್ಟಾಗ ಆಪಾದಿತ ಆ.ಸ.ನೌ ಸಮೂಹ ಸಂಪನ್ಮೂಲ ಕೇಂದ್ರದ ಖಾತೆಗೆ ಜಮಾ ಮಾಡಿರುತ್ತಾರೆ. ಪ್ರತಿಭಾಕಾರಂಜಿ ವೆಚ್ಚಮತ್ತು ನಿರ್ವಹಣವೆಚ್ಚಕ್ಕೆ ಸಂಬಂಧಿಸಿದಂತೆ ಸಿಆರ್‌ಪಿ ರವರಿಂದ ತಲಾ 1000/– ಪಡೆದು ಆಪಾದಿತ ಸರ್ಕಾರಿ ನೌಕರರಿಗೆ ಕೊಟ್ಟಿರುವುದಿಲ್ಲ ಮತ್ತು ಸದರಿಯವರು ಈ ರೀತಿ ಹಣದ ಬೇಡಿಕೆ ಇಟ್ಟಿಲ್ಲ, ತನಿಖಾಧಿಕಾರಿಯೂ ತನ್ನನ್ನು ವಿಚಾರಣೆ ಮಾಡಿರುವುದಿಲ್ಲವೆಂದು ಸಾಕ್ಷ್ಯ ನುಡಿದಿರುತ್ತಾರೆ.

25. ಡಿ.ಡಬ್ಲ್ಯೂ–4 ಶ್ರೀ ಮಲಿಯಪ್ಪ ಸಿ.ಎಂ., ಶಿಕ್ಷಕರು, ತಾನು ಸಿಆರ್‌ಪಿ ಯಾಗಿ ಕರ್ತವ್ಯ ನಿರ್ವಹಿಸಿದ್ದಾಗಿ, ಶ್ರೀ ಕುಮಾರ್ ಎಲ್, ಶ್ರೀ ಕಿರಣ್ ಕುಮಾರ್ ಮತ್ತು ಶ್ರೀ ಜಿ.ಇ.

ಸೋಮಶೇಖರ್ ರವರು ಬಿಆರ್‌ಪಿ ಆಗಿ ಕರ್ತವ್ಯ ನಿರ್ವಹಿಸಿದ್ದು, ಸಿಆರ್‌ಪಿ ರವರಿಗೆ ಮತ್ತು ಬಿಆರ್‌ಪಿ ರವರಿಗೆ ಸ್ಥಳ ನಿಯುಕ್ತಿಗೊಳಿಸುವ ಅಧಿಕಾರ ಡಿಡಿಪಿಐ ರವರಿಗೆ ಇದ್ದು, ಆ ರೀತಿ ಸಿಆರ್‌ಪಿ ಮತ್ತು ಬಿಆರ್‌ಪಿ ರವರಿಗೆ ಸ್ಥಳ ನಿಯುಕ್ತಿಗೊಳಿಸಲು ಬಿಇಓ ರವರು ಹಣಕ್ಕೆ ಬೇಡಿಕೆ ಇಟ್ಟಿಲ್ಲ. ಸದರಿ ಕಿರಣ್ ಕುಮಾರ್ ಮತ್ತು ಸೋಮಶೇಖರ್ ರವರು ನನ್ನ ಮುಖಾಂತರ ಆಪಾದಿತ ಸರ್ಕಾರಿ ನೌಕರರಿಗೆ ಸ್ಥಳ ನಿಯುಕ್ತಿಗೊಳಿಸಲು ಹಣ ಪಡೆದಿದ್ದಾರೆ ಎಂದು ತಾನು ತನಿಖಾಧಿಕಾರಿಯವರ ಮುಂದೆ ಹೇಳಿರುವುದಿಲ್ಲವೆಂದು ಸಾಕ್ಷ್ಯ ನುಡಿದಿರುತ್ತಾರೆ.

26. ಡಿಡಬ್ಲ್ಯೂ-5 ಶ್ರೀ ಪ್ರವೀಣ್ ಕುಮಾರ್ ಬಿ.ಜಿ, ಶಿಕ್ಷಕರು ತಮ್ಮ ಮುಖ್ಯ ವಿಚಾರಣೆಯಲ್ಲಿ, ತಾನು ಆಪಾದಿತ ಸರ್ಕಾರಿ ನೌಕರರು ಬಿಇಓ ಆಗಿ ಕರ್ತವ್ಯ ನಿರ್ವಹಿಸುವಾಗ ಮಲ್ಲೇನಹಳ್ಳಿ ಕ್ಲಸ್ಟರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದುದಾಗಿ, 2013-14 ನೇ ಸಾಲಿನಲ್ಲಿ ಎರಡನೇ ಜೊತೆ ಉಚಿತ ಸಮವಸ್ತ್ರ ಖರೀದಿಸಲು ಬಿಇಓ, ಬಿಆರ್‌ಪಿ ಮತ್ತು ಸಿಆರ್‌ಪಿ ರವರ ಸಭೆಯನ್ನು ಕರೆದಿದ್ದರು, ಸದರಿ ಸಭೆಯಲ್ಲಿ ಸುತ್ತೋಲೆಯನ್ನು ಕೊಟ್ಟು ಶಾಲೆ ಮುಖ್ಯ ಶಿಕ್ಷಕರು ಮತ್ತು ಎಸ್‌ಡಿಎಂಸಿ ರವರು ಸಮವಸ್ತ್ರ ಖರೀದಿಸಲು ಸೂಚಿಸಿದರೆಂದು, ಸದರಿಯಂತೆ ಮಲ್ಲೇನಹಳ್ಳಿಯ ಮುಖ್ಯ ಶಿಕ್ಷಕರು ಮತ್ತು ಶಿಕ್ಷಕರ ಸಭೆಯನ್ನು ಕರೆದು ಸುತ್ತೋಲೆಯನ್ನು ಕೊಟ್ಟು ಮುಂದಿನ ಕ್ರಮ ತೆಗೆದುಕೊಳ್ಳುವಂತೆ ತಾನು ಸೂಚಿಸಿರುವುದಾಗಿ, ಆಪಾದಿತರ ಸರ್ಕಾರಿ ನೌಕರರು ತಾವೇ ಸ್ವತಃ ಸಮವಸ್ತ್ರವನ್ನು ಖರೀದಿಸಿರುವುದಿಲ್ಲ.

27. ದೂರುದಾರರು ಸಲ್ಲಿಸಿರುವ ದೂರು ನಿ.ಪಿ-1 ರಿಂದ ನಿ.ಪಿ-3, ಹಾಗೂ ಪರಿಶೀಲನಾಧಿಕಾರಿ ಉಪ ನಿಬಂಧಕರು, ವಿಚಾರಣೆಗಳು-1, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರ ಸಾಕ್ಷ್ಯ ಮತ್ತು ಕಡತದಲ್ಲಿರುವ ದಾಖಲಾತಿಗಳನ್ನು ಪರಿಶೀಲಿಸಲಾಗಿ,

(i)ನೇ ಆರೋಪವಾದ 2013–14ನೇ ಸಾಲಿನ 2ನೇ ಜೊತೆ ಬಟ್ಟೆಯನ್ನು ಖರೀದಿಸುವ ಬಗ್ಗೆ ಸರ್ಕಾರದಿಂದ ಹೊರಡಿಸಿರುವ ಸುತ್ತೋಲೆಯನ್ನು ಸಿ.ಆರ್.ಪಿ.ಗಳಿಗೆ ಮತ್ತು ಶಾಲೆಗಳ ಮುಖ್ಯ ಶಿಕ್ಷಕರುಗಳಿಗೆ ವಿತರಿಸದೇ ಇರುವುದರಿಂದ, ಶಾಲೆಯ ಮುಖ್ಯ ಶಿಕ್ಷಕರು ಸುತ್ತೋಲೆಯಂತೆ ನಡವಳಿಯನ್ನು ಮಾಡದೇ ಇರುವುದು ಕಂಡು ಬಂದಿರುತ್ತದೆ. 2013–14ನೇ ಸಾಲಿನ 2ನೇ ಜೊತೆ ಬಟ್ಟೆಯನ್ನು ಆಗ ಬಿ.ಇ.ಓ. ಆಗಿದ್ದ ನೀವೇ ತರಿಸಿಕೊಟ್ಟಿರುತ್ತೀರಿ ಎಂಬ ಆಪಾದನೆಗೆ ಸಂಬಂಧಿಸಿದಂತೆ,

**ಡಿಡಬ್ಲ್ಯೂ–2 ರವರು** ತಮ್ಮ ಸಾಕ್ಷ್ಯದಲ್ಲಿ 2013–14ನೇ ಸಾಲಿನಲ್ಲಿ ಬಟ್ಟೆ ಖರೀದಿಸುವ ಬಗ್ಗೆ ಚಿಕ್ಕಮಗಳೂರು ತಾಲ್ಲೂಕಿನ ಸಿ.ಆರ್.ಪಿ ಮತ್ತು ಶಾಲಾ ಮುಖ್ಯ ಶಿಕ್ಷಕರುಗಳಿಗೆ ಸಭೆ ಕರೆದು ಚರ್ಚಿಸಿ, ಸರ್ಕಾರಿ ಆದೇಶದಂತೆ ಸಮವಸ್ತ್ರವನ್ನು ವಿತರಿಸುವಂತೆ ಆಪಾದಿತ ಸರ್ಕಾರಿ ನೌಕರರು ಚರ್ಚಿಸಿರುವುದಾಗಿ ಹಾಗೂ ಆಪಾದಿತ ಸರ್ಕಾರಿ ನೌಕರರೇ ಶಾಲೆ ಸಮವಸ್ತ್ರವನ್ನು ಖರೀದಿಸಿರುವುದಿಲ್ಲವೆಂದು ಸಾಕ್ಷ್ಯ ನುಡಿದಿರುತ್ತಾರೆ.

**ಡಿಡಬ್ಲ್ಯೂ–5** ಶ್ರೀ ಪ್ರವೀಣ್ ಕುಮಾರ್ ಬಿ.ಜಿ, ಶಿಕ್ಷಕರು ತಮ್ಮ ಮುಖ್ಯ ವಿಚಾರಣೆಯಲ್ಲಿ, 2013--14 ನೇ ಸಾಲಿನಲ್ಲಿ ಎರಡನೇ ಜೊತೆ ಉಚಿತ ಸಮವಸ್ತ್ರ ಖರೀದಿಸಲು ಬಿಇಓ, ಬಿಆರ್‌ಪಿ ಮತ್ತು ಸಿಆರ್‌ಪಿ ರವರ ಸಭೆಯನ್ನು ಕರೆದಿದ್ದರು, ಸದರಿ ಸಭೆಯಲ್ಲಿ ಸುತ್ತೋಲೆಯನ್ನು ಕೊಟ್ಟು ಶಾಲೆ ಮುಖ್ಯ ಶಿಕ್ಷಕರು ಮತ್ತು ಎಸ್‌ಡಿಎಂಸಿ ರವರು ಸಮವಸ್ತ್ರ ಖರೀದಿಸಲು ಸೂಚಿಸಿದರೆಂದು, ಸದರಿಯಂತೆ ಮಲ್ಲೇನಹಳ್ಳಿಯ ಮುಖ್ಯ ಶಿಕ್ಷಕರು ಮತ್ತು ಶಿಕ್ಷಕರ ಸಭೆಯನ್ನು ಕರೆದು ಸುತ್ತೋಲೆಯನ್ನು ಕೊಟ್ಟು ಮುಂದಿನ ಕ್ರಮ ತೆಗೆದುಕೊಳ್ಳುವಂತೆ ತಾನು ಸೂಚಿಸಿರುವುದಾಗಿ, ಆಪಾದಿತರ ಸರ್ಕಾರಿ ನೌಕರರು ತಾವೇ ಸ್ವತ: ಸಮವಸ್ತ್ರವನ್ನು ಖರೀದಿಸಿರುವುದಿಲ್ಲವೆಂದು ಸಾಕ್ಷ್ಯ ನುಡಿದಿರುತ್ತಾರೆ.

ಲಭ್ಯವಿರುವ ದಾಖಲಾತಿಗಳಿಂದ ಮತ್ತು ಡಿಡಬ್ಲ್ಯೂ–3 ಮತ್ತು 5 ರವರುಗಳ ಸಾಕ್ಷ್ಯದಿಂದ 2013–14ನೇ ಸಾಲಿನಲ್ಲಿ ಬಟ್ಟೆ ಖರೀದಿಸುವ ಬಗ್ಗೆ ಚಿಕ್ಕಮಗಳೂರು ತಾಲ್ಲೂಕಿನ ಸಿ.ಆರ್.ಪಿ ಮತ್ತು ಶಾಲಾ ಮುಖ್ಯ ಶಿಕ್ಷಕರುಗಳಿಗೆ ಸಭೆ ಕರೆದು ಚರ್ಚಿಸಿ,

ಸರ್ಕಾರಿ ಆದೇಶದಂತೆ ಸಮವಸ್ತ್ರವನ್ನು ವಿತರಿಸುವಂತೆ ಆಪಾದಿತ ಸರ್ಕಾರಿ ನೌಕರರು ಚರ್ಚಿಸಿರುವುದಾಗಿ ಹಾಗೂ ಸಂಬಂಧಪಟ್ಟ ಶಾಲಾ ಮುಖ್ಯಸ್ಥರ ಸಮವಸ್ತ್ರವನ್ನು ಖರೀದಿಸಿರುವುದು ವಿಚಾರಣೆಯಿಂದ ಸ್ಪಷ್ಟವಾಗಿದ್ದು, 1ನೇ ಆರೋಪವು ಸಾಬೀತಾಗಿರುವುದಿಲ್ಲ.

(ii) ನೇ ಆರೋಪವಾದ ಸರ್ಕಾರ ಸಂ/ಸಶಿಇ/1-8/ನೆಸಮವಸ್ತ್ರ/2013-14, ದಿ: 17/07/2013 ರಲ್ಲಿ ಸರ್ಕಾರ ಎಲ್ಲಾ 1 ರಿಂದ 8ನೇ ತರಗತಿವರೆಗೆ ವ್ಯಾಸಂಗ ಮಾಡುತ್ತಿರುವ ಪ್ರಾಥಮಿಕ ಶಾಲೆಗಳಿಗೆ 2ನೇ ಜೊತೆ ಉಚಿತ ಸಮವಸ್ತ್ರ ಖರೀದಿಸಲು ಸುತ್ತೋಲೆಯನ್ನು ಹೊರಡಿಸಿದ್ದು, ಸುತ್ತೋಲೆಯಲ್ಲಿ ಶಾಲೆಯ ಎಸ್.ಡಿ.ಎಂ.ಸಿ.ಯವರು ಬಟ್ಟೆಗಳನ್ನು ದರಪಟ್ಟಿ ಮೂಲಕ ಖರೀದಿಸಲು ಆದೇಶಿಸಿರುತ್ತದೆ. ದಾಖಲಾತಿಗಳನ್ನು ಪರಿಶೀಲಿಸಲಾಗಿ ಕೆಲವು ಶಾಲೆಗಳಲ್ಲಿ ಹೆಚ್ಚಿನ ಕೊಟೇಶನ್‌ಗಳು ಜೆರಾಕ್ಸ್ ಪ್ರತಿಗಳಾಗಿದ್ದು, ಜೆರಾಕ್ಸ್ ಪ್ರತಿಗಳ ಮೇಲೆ ಮೊಹರಿನೊಂದಿಗೆ ಸಹಿ ಮಾಡಿರುವುದು ಕಂಡು ಬಂದಿರುತ್ತದೆ. ಕೆಲವು ಕೊಟೇಷನ್‌ಗಳಲ್ಲಿ ದಿನಾಂಕಗಳನ್ನು ಮತ್ತು ಶಾಲೆಗಳ ವಿಳಾಸಗಳನ್ನು ನಮೂದಿಸಿರುವುದಿಲ್ಲ. ಶಾಲೆಯಲ್ಲಿ ಎಸ್.ಡಿ.ಎಂ.ಸಿ. ಮೂಲಕ ಯಾರೂ ಸಹ ಕೊಟೇಷನ್‌ಗಳನ್ನು ಕಾಲ್ ಮಾಡಿರುವುದು ಕಂಡು ಬಂದಿರುವುದಿಲ್ಲ. ಸುತ್ತೋಲೆಯನ್ನು ಮೇಲಾಧಿಕಾರಿಗಳು ತಾಲ್ಲೂಕಿನ ಸಂಬಂಧಪಟ್ಟ ಸಿ.ಆರ್.ಪಿ.ಗಳಿಗೆ ಮತ್ತು ಶಾಲೆಗಳ ಮುಖ್ಯೋಪಾಧ್ಯಾಯರುಗಳಿಗೆ ವಿತರಣೆಯಾಗದೇ ಇರುವುದರಿಂದ ಎಲ್ಲಾ ಶಾಲೆಗಳಲ್ಲಿ ಕಳೆದ ಬಾರಿ ಸರ್ಕಾರದಿಂದ ಬಂದ ರೀತಿಯಲ್ಲಿಯೇ ಇರಬಹುದೆಂದು ತಿಳಿದು ಬಟ್ಟೆಗಳನ್ನು ವಿತರಣೆ ಮಾಡಿರುವುದಾಗಿ ಕಂಡು ಬಂದಿರುತ್ತದೆ. ಸಾಕ್ಷಿದಾರರ ಹೇಳಿಕೆಗಳಿಂದ ಆ.ಸ.ನೌಕರರಾದ ನೀವೇ ಬಟ್ಟೆಗಳನ್ನು ಮೌಖಿಕವಾಗಿ ಇಂಡೆಂಟ್ ಮಾಡಿ ತರಿಸಿದಂತೆ ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

**ಡಿಡಬ್ಲ್ಯೂ-2 ರವರು** ತಮ್ಮ ಸಾಕ್ಷ್ಯದಲ್ಲಿ 2013-14ನೇ ಸಾಲಿನಲ್ಲಿ ಬಟ್ಟೆ ಖರೀದಿಸುವ ಬಗ್ಗೆ ಚಿಕ್ಕಮಗಳೂರು ತಾಲ್ಲೂಕಿನ ಸಿ.ಆರ್.ಪಿ ಮತ್ತು ಶಾಲಾ ಮುಖ್ಯ ಶಿಕ್ಷಕರುಗಳಿಗೆ ಸಭೆ ಕರೆದು ಚರ್ಚಿಸಿ, ಸರ್ಕಾರಿ ಆದೇಶದಂತೆ ಸಮವಸ್ತ್ರವನ್ನು ವಿತರಿಸುವಂತೆ ಆಪಾದಿತ ಸರ್ಕಾರಿ ನೌಕರರು ಚರ್ಚಿಸಿರುವುದಾಗಿ ಸಾಕ್ಷ್ಯ ನುಡಿದಿದ್ದು, ಹಾಗೂ **ಡಿಡಬ್ಲ್ಯೂ-5 ಶ್ರೀ ಪ್ರವೀಣ್ ಕುಮಾರ್** ಬಿ.ಜಿ, ಶಿಕ್ಷಕರು ತಮ್ಮ ಮುಖ್ಯ ವಿಚಾರಣೆಯಲ್ಲಿ, 2013-14 ನೇ ಸಾಲಿನಲ್ಲಿ ಎರಡನೇ ಜೊತೆ ಉಚಿತ ಸಮವಸ್ತ್ರ ಖರೀದಿಸಲು ಬಿಇಓ, ಬಿಆರ್‌ಪಿ ಮತ್ತು

ಸಿಆರ್‌ಪಿ ರವರ ಸಭೆಯನ್ನು ಕರೆದಿದ್ದರು, ಸದರಿ ಸಭೆಯಲ್ಲಿ ಸುತ್ತೋಲೆಯನ್ನು ಕೊಟ್ಟು ಶಾಲೆ ಮುಖ್ಯ ಶಿಕ್ಷಕರು ಮತ್ತು ಎಸ್‌ಡಿಎಂಸಿ ರವರು ಸಮವಸ್ತ್ರ ಖರೀದಿಸಲು ಸೂಚಿಸಿದರೆಂದು, ಸದರಿಯಂತೆ ಮಲ್ಲೇನಹಳ್ಳಿಯ ಮುಖ್ಯ ಶಿಕ್ಷಕರು ಮತ್ತು ಶಿಕ್ಷಕರ ಸಭೆಯನ್ನು ಕರೆದು ಸುತ್ತೋಲೆಯನ್ನು ಕೊಟ್ಟು ಮುಂದಿನ ಕ್ರಮ ತೆಗೆದುಕೊಳ್ಳುವಂತೆ ತಾನು ಸೂಚಿಸಿರುವುದಾಗಿ ಸಾಕ್ಷ್ಯ ನುಡಿದಿರುವುದರಿಂದ ಹಾಗೂ ಆಪಾದಿತ ಸರ್ಕಾರಿ ನೌಕರರು ಬಟ್ಟೆಗಳನ್ನು ಮೌಖೀಕವಾಗಿ ಇಂಡೆಂಟ್ ಮಾಡಿರುವ ಬಗ್ಗೆ ಸರಬರಾಜು ಸಂಸ್ಥೆಯವರಾಗಲೀ ಸಂಬಂಧಪಟ್ಟ ಶಾಲೆಯವರಾಗಲೀ ಈ ಪ್ರಾಧಿಕಾರದ ಮುಂದೆ ಸಾಕ್ಷ್ಯ ನುಡಿದಿರುವುದು ಕಂಡು ಬಂದಿರುವುದಿಲ್ಲ, ಆದ್ದರಿಂದ ಈ ಆರೋಪವು ಸಹ ವಿಚಾರಣೆಯಿಂದ ಸಾಬೀತಾಗಿರುವುದಿಲ್ಲ.

(iii) ಕುಮಾರ್.ಎಲ್, ಶ್ರೀ ಕಿರಣ್‌ಕುಮಾರ್ ಹಾಗೂ ಜೆ.ಇ.ಸೋಮಶೇಖರ್, ಬಿ.ಆರ್.ಪಿ. ಇವರುಗಳ ಹೇಳಿಕೆಗಳಿಂದ ಶ್ರೀ ರಾಜೇಗೌಡ ರವರು ಬಿ.ಆರ್.ಪಿ. ಮತ್ತು ಸಿ.ಆರ್.ಪಿ.ಗಳ ವರ್ಗಾವಣೆ ಸ್ಥಳ ನಿಯುಕ್ತಿಗೊಳಿಸಿಕೊಡಲು ಅವರಿಗೆ ಆಪ್ತರಾದ ಮಲಿಯಪ್ಪ, ಸಿ.ಆರ್.ಪಿ.ರವರ ಮೂಲಕ ಲಂಚದ ಹಣಕ್ಕೆ ಬೇಡಿಕೆ ಇಟ್ಟಿರುತ್ತೀರೆಂದು ಸಾಕ್ಷಿದಾರರುಗಳ ಹೇಳಿಕೆಗಳಿಂದ ಮೇಲ್ನೋಟಕ್ಕೆ ಕಂಡು ಬಂದಿರುತ್ತದೆ.

ಡಿ.ಡಬ್ಲ್ಯೂ–4 ಶ್ರೀ ಮಲಿಯಪ್ಪ ಸಿ.ಎಂ., ಶಿಕ್ಷಕರು, ತಾನು ಸಿಆರ್‌ಪಿ ಯಾಗಿ ಕರ್ತವ್ಯ ನಿರ್ವಹಿಸಿದ್ದಾಗಿ, ಶ್ರೀ ಕುಮಾರ್ ಎಲ್, ಶ್ರೀ ಕಿರಣ್ ಕುಮಾರ್ ಮತ್ತು ಶ್ರೀ ಜಿ.ಇ. ಸೋಮಶೇಖರ್ ರವರು ಬಿಆರ್‌ಪಿ ಆಗಿ ಕರ್ತವ್ಯ ನಿರ್ವಹಿಸಿದ್ದು, ಸಿಆರ್‌ಪಿ ರವರಿಗೆ ಮತ್ತು ಬಿಆರ್‌ಪಿ ರವರಿಗೆ ಸ್ಥಳ ನಿಯುಕ್ತಿಗೊಳಿಸುವ ಅಧಿಕಾರ ಡಿಡಿಪಿಐ ರವರಿಗೆ ಇದ್ದು, ಆ ರೀತಿ ಸಿಆರ್‌ಪಿ ಮತ್ತು ಬಿಆರ್‌ಪಿ ರವರಿಗೆ ಸ್ಥಳ ನಿಯುಕ್ತಿಗೊಳಿಸಲು ಡಿಜಿಓ ರವರು ಹಣಕ್ಕೆ ಬೇಡಿಕೆ ಇಟ್ಟಿಲ್ಲ. ಸದರಿ ಕಿರಣ್ ಕುಮಾರ್ ಮತ್ತು ಸೋಮಶೇಖರ್ ರವರು ನನ್ನ ಮುಖಾಂತರ ಆಪಾದಿತ ಸರ್ಕಾರಿ ನೌಕರರಿಗೆ ಸ್ಥಳ ನಿಯುಕ್ತಿಗೊಳಿಸಲು ಹಣ ಪಡೆದಿದ್ದಾರೆ

ಎಂದು ತಾನು ತನಿಖಾಧಿಕಾರಿಯವರ ಮುಂದೆ ಹೇಳಿರುವುದಿಲ್ಲವೆಂದು ಸಾಕ್ಷ್ಯ ನುಡಿದಿರುವುದರಿಂದ ಸದರಿ ಆರೋಪವು ಸಹ ಸಾಬೀತಾಗಿರುವುದಿಲ್ಲ.

(iv) ಶಿಕ್ಷಕರಾದ ಶ್ರೀ ಬಸವಕುಮಾರ್, ಸ್ವಾಮಿ, ನಂಜುಂಡಪ್ಪ, ನಡಾಫ್, ಜಗದೀಶ್, ಬಸವರಾಜ್ ಮತ್ತು ಅಶೋಕ್.ವಿ.ಕೆ. ಇವರುಗಳ ಹೇಳಿಕೆಗಳಿಂದ ಶ್ರೀ ರಾಜೇಗೌಡ ಇವರು ನಿರ್ವಹಣಾ ಭತ್ಯೆಯ ಬಾಬ್ತು ಎಲ್ಲಾ ಸಿ.ಆರ್.ಪಿ.ಗಳಿಂದ ತಲಾ ರೂ.1000/- ಹಣವನ್ನು ರೇವಣ್ಣಗೌಡ, ಸಿ.ಆರ್.ಪಿ.ರವರ ಮೂಲಕ ಪಡೆದುಕೊಂಡಿರುತ್ತೀರೆಂದು ಕಂಡು ಬಂದಿರುತ್ತದೆ.

ಡಿಡಬ್ಲ್ಯೂ-3 ಶ್ರೀ ಎಂ.ಎ. ರೇವಣ್ಣಗೌಡ ನಿವೃತ್ತ ಮುಖ್ಯ ಶಿಕ್ಷಕರು ತಮ್ಮ ಸಾಕ್ಷ್ಯದಲ್ಲಿ ಪ್ರತಿಭಾ ಕಾರಂಜಿ ಚಟುವಟಿಕೆಗಾಗಿ ಪ್ರತಿ ಕ್ಲಸ್ಟರ್‌ಗೆ ಇಲಾಖೆಯಿಂದ ಹಣ ಬಿಡುಗಡೆಯಾಗುತ್ತಿತ್ತು, ಪ್ರತಿ ಕ್ಲಸ್ಟರ್‌ಗೆ ಬಿಇಒ ಮತ್ತು ಬಿಆರ್‌ಸಿ ರವರ ಜಂಟಿ ಖಾತೆಗೆ ಹಣ ವರ್ಗಾವಣೆಯಾಗುತ್ತಿತ್ತು. ನಾವು ಬಿಲ್ಲು ಓಚರ್‌ಗಳನ್ನು ನಾವು ಕೊಟ್ಟಾಗ ಆ.ಸ.ನೌ ಸಮೂಹ ಸಂಪನ್ಮೂಲ ಕೇಂದ್ರದ ಖಾತೆಗೆ ಹಣ ಜಮಾ ಮಾಡಿರುತ್ತಾರೆ. ಪ್ರತಿಭಾಕಾರಂಜಿ ವೆಚ್ಚ ಮತ್ತು ನಿರ್ವಹಣವೆಚ್ಚಕ್ಕೆ ಸಂಬಂಧಿಸಿದಂತೆ ಸಿಆರ್‌ಪಿ ರವರಿಂದ ತಲಾ 1000/- ಪಡೆದು ಆಪಾದಿತ ಸರ್ಕಾರಿ ನೌಕರರಿಗೆ ಕೊಟ್ಟಿರುವುದಿಲ್ಲ ಮತ್ತು ಸದರಿಯವರು ಈ ರೀತಿ ಹಣದ ಬೇಡಿಕೆ ಇಟ್ಟಿಲ್ಲ, ತನಿಖಾಧಿಕಾರಿಯೂ ತನ್ನನ್ನು ವಿಚಾರಣೆ ಮಾಡಿರುವುದಿಲ್ಲವೆಂದು ಸಾಕ್ಷ್ಯ ನುಡಿದಿರುವುದರಿಂದ ಸದರಿ ವಿಚಾರಣೆಯಿಂದ ಈ ಆಪಾದನೆಯೂ ಸಹ ಸಾಬೀತಾಗಿರುವುದಿಲ್ಲ.

(v) ಶ್ರೀ ಮೂಡಲಗಿರಿಯಪ್ಪ, ಸ್ವಾಮಿ, ನಂಜುಂಡಪ್ಪ, ನಡಾಫ್ ಮತ್ತು ಬಸವರಾಜು ಇವರುಗಳನ್ನು ವಿಚಾರ ಮಾಡಿದಾಗ, ಪ್ರತಿಭಾ ಕಾರಂಜಿಗೆ ಸಿ.ಆರ್.ಪಿ.ಗಳು ಖರ್ಚು ಮಾಡಿದ ಬಾಬ್ತು ಹಣವನ್ನು ಮಂಜೂರು ಮಾಡಿಕೊಟ್ಟು, ಆ ಬಾಬ್ತು ತಲಾ ರೂ.1,000/- ವನ್ನು ಕೊಡುವಂತೆ ಸಿ.ಆರ್.ಪಿ.ಗಳಿಗೆ ಒತ್ತಾಯ ಮಾಡಿ ರೇವಣ್ಣಗೌಡ, ಸಿ.ಆರ್.ಪಿ.ರವರ ಮೂಲಕ ಹಣ ಪಡೆದುಕೊಂಡಿರುತ್ತೀರಿ.

ಸದರಿ ಆರೋಪದ ಬಗ್ಗೆ ಈಗಾಗಲೇ ಡಿಡಬ್ಲ್ಯೂ-3 ಮತ್ತು 5 ರವರುಗಳು ತಮ್ಮ ಹೇಳಿಕೆಯಲ್ಲಿ ಪ್ರತಿಭಾ ಕಾರಂಜಿ ಚಟುವಟಿಕೆಗಾಗಿ ಪ್ರತಿ ಕ್ಲಸ್ಟರ್‌ಗೆ ಇಲಾಖೆಯಿಂದ ಹಣ ಬಿಡುಗಡೆಯಾಗುತ್ತಿತ್ತು, ಪ್ರತಿ ಕ್ಲಸ್ಟರ್‌ಗೆ ಬಿಇಒ ಮತ್ತು ಬಿಆರ್‌ಸಿ ರವರ ಜಂಟಿ ಖಾತೆಗೆ ಹಣ ವರ್ಗಾವಣೆಯಾಗುತ್ತಿತ್ತು. ನಾವು ಬಿಲ್ಲು ಓಚರ್‌ಗಳನ್ನು ನಾವು ಕೊಟ್ಟಾಗ ಆ.ಸ.ನೌ ಸಮೂಹ ಸಂಪನ್ಮೂಲ ಕೇಂದ್ರದ ಖಾತೆಗೆ ಹಣ ಜಮಾ ಮಾಡಿರುತ್ತಾರೆ. ಪ್ರತಿಭಾಕಾರಂಜಿ ವೆಚ್ಚ ಮತ್ತು ನಿರ್ವಹಣವೆಚ್ಚಕ್ಕೆ ಸಂಬಂಧಿಸಿದಂತೆ ಸಿಆರ್‌ಪಿ ರವರಿಂದ ತಲಾ 1000/- ಪಡೆದು ಆಪಾದಿತ ಸರ್ಕಾರಿ ನೌಕರರಿಗೆ ಕೊಟ್ಟಿರುವುದಿಲ್ಲ ಮತ್ತು ಸದರಿಯವರು ಈ ರೀತಿ ಹಣದ ಬೇಡಿಕೆ ಇಟ್ಟಿಲ್ಲ, ತನಿಖಾಧಿಕಾರಿಯೂ ತನ್ನನ್ನು ವಿಚಾರಣೆ ಮಾಡಿರುವುದಿಲ್ಲವೆಂದು ಸಾಕ್ಷ್ಯ ನುಡಿದಿರುವುದರಿಂದ ಈ ಆರೋಪಣೆಯು ಸಹ ಸಾಬೀತಾಗಿರುವುದಿಲ್ಲ.

**(vi)** ಆ.ಸ.ನೌಕರರಾದ ನೀವು ಮಾರ್ಗದರ್ಶಿ ಸೂತ್ರದ ಕ್ರ.ಸಂ.2.6 ರ ಆದೇಶದಂತೆ ಸಾದಿಲ್ವಾರು ಮೊತ್ತವನ್ನು ಸಮೀಕ್ಷೆಗೆ 3 ದಿನ ಮುಂಚಿತವಾಗಿ ನೀಡಬೇಕಾಗಿದ್ದು, ಗಣಕೀಕಾರ್ಯ ಮುಗಿದು ಸುಮಾರು ಒಂದು ತಿಂಗಳು ತಡವಾಗಿ ಸಂಭಾವನೆಯನ್ನು ಬ್ಯಾಂಕ್‌ಗೆ ಜಮಾ ಮಾಡಿರುತ್ತೀರಿ.

ಆಪಾದಿತ ಸರ್ಕಾರಿ ನೌಕರರು ಸಲ್ಲಿಸಿರುವ **ನಿ.ಡಿ-16 ಮತ್ತು 17** ದಾಖಲೆಯನ್ನು ಪರಿಶೀಲಿಸಲಾಗಿ ಗಣಕೀಕಾರ್ಯವನ್ನು ಸಮನ್ವಯ ಅಧಿಕಾರಿ, ಕ್ಷೇತ್ರ ಸಂಪನ್ಮೂಲ ಕೇಂದ್ರ ಚಿಕ್ಕಮಗಳೂರು ಶ್ರೀಮತಿ ಅರುಣಕುಮಾರಿ ರವರು ಸದರಿ ಬಿಲ್ಲನ್ನು ದಿನಾಂಕ 30.12.2014 ರಂದು ಆಪಾದಿತ ಸರ್ಕಾರಿ ನೌಕರವರಿಗೆ ನೀಡಿದ್ದು, ನಿ.ಡಿ-17 ರಂತೆ ಸದರಿಯವರು ಅದೇ ದಿವಸ ಅಂದರೆ ದಿನಾಂಕ 30.12.2014 ರಂದು ಬ್ಯಾಂಕ್ ಖಾತೆಗೆ ಜಮಾ ಮಾಡಿದ್ದು, ಈ ಆರೋಪವು ಸಹ ವಿಚಾರಣೆಯಿಂದ ಸಾಬೀತಾಗಿರುವುದಿಲ್ಲ.

**(vii)** ಆ.ಸ.ನೌಕರರಾದ ನೀವು ಶಾಲೆಗಳ ಮಾನ್ಯತೆ ನವೀಕರಣ ಸಮಯದಲ್ಲಿ ಗಿಫ್ಟ್ ರೂಪದಲ್ಲಿ ಲಂಚದ ಹಣವನ್ನು ಪಡೆದಿರುತ್ತೀರಿ.

ಆಪಾದಿತ ಸರ್ಕಾರಿ ನೌಕರರ ವಿರುದ್ಧ ಶಾಲೆಗಳ ಮಾನ್ಯತೆ ನವೀಕರಣ ಸಮಯದಲ್ಲಿ ಗಿಫ್ಟ್ ರೂಪದಲ್ಲಿ ಲಂಚದ ಹಣವನ್ನು ಪಡೆದುಕೊಂಡಿರುತ್ತಾರೆ ಎಂಬ ಕುರಿತು ಯಾವುದೇ ದಾಖಲಾತಿಗಳು ಲಭ್ಯವಿರುವುದಿಲ್ಲ ಹಾಗೂ ಪರಿಶೀಲನಾಧಿಕಾರಿಗಳು ಈ ಬಗ್ಗೆ ಯಾವುದೇ ದಾಖಲೆಗಳಿಲ್ಲ ಎಂದು ಪಾಟೀ ಸವಾಲಿನಲ್ಲಿ ಸಾಕ್ಷ್ಯ ನುಡಿದಿದ್ದು, ಸದರಿ ಆರೋಪವು ಸಹ ಸಾಬೀತಾಗಿರುವುದಿಲ್ಲ.

ಇನ್ನುಳಿದ ಆರೋಪ viii ರಿಂದ xi ಆರೋಪಗಳಾದ ಶ್ರೀಮತಿ ಕೆ.ವಿನುತ ವಿದೇಶಕ್ಕೆ ತೆರಳುವ ಸಂಬಂಧ ಪ್ರತ್ಯೇಕ ಪ್ರಸ್ತಾವನೆ ಸಲ್ಲಿಸುವಂತೆ ತಿಳಿಸಿದ್ದರೂ ಸಹ ಆ.ಸ.ನೌ ರವರು ಶ್ರೀಮತಿ ವಿನುತ ರವರಿಗೆ 1/6/2013 ರಿಂದ 30/05/2014 ರವರೆಗೆ ವೇತನರಹಿತ ರಜೆ ಮಂಜೂರು ಮಾಡಿರುವ ಬಗ್ಗೆ, ಶ್ರೀ ರಾಜು ರವರನ್ನು ಬಿಡುಗೊಡೆಗೊಳಿಸಲು 8 ತಿಂಗಳುಗಳ ವಿಳಂಬ ಮಾಡಿರುವ ಬಗ್ಗೆ, ಕೊಟೇಶನ್‌ಗಳನ್ನು ಹಾಜರ್‌ಪಡಿಸಿರುವ ಕುರಿತು ಇತ್ಯಾದಿಗಳ ಕುರಿತು ಶಿಸ್ತು ಪ್ರಾಧಿಕಾರವು ಆರೋಪವನ್ನು ರುಜುವಾತು ಪಡಿಸಲು ವಿಫಲರಾಗಿರುತ್ತಾರೆಂದು ಅಭಿಪ್ರಾಯಿಸಿರುತ್ತೇನೆ.

**ಅಂಶ-2: ಈ ಮೇಲ್ಕಂಡ ಕಾರಣಗಳಿಗಾಗಿ ಈ ಕೆಳಕಂಡಂತೆ ವಿಚಾರಣಾ ವರದಿ ಸಲ್ಲಿಸಲಾಗಿದೆ.**

**: ವಿಚಾರಣಾ ವರದಿ :**

ಶಿಸ್ತು ಪ್ರಾಧಿಕಾರದವು ಆ.ಸ.ನೌ ಶ್ರೀ **ರಾಜೇಗೌಡ,** ಹಿಂದಿನ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಚಿಕ್ಕಮಗಳೂರು ರವರ ವಿರುದ್ಧ ದೋಷಾರೋಪಣೆಯಲ್ಲಿ ಮಾಡಲಾದ 2(i) ರಿಂದ (xi) ರವರೆಗಿನ ಎಲ್ಲಾ ಆಪಾದನೆಗಳನ್ನು ರುಜುವಾತು ಪಡಿಸುವಲ್ಲಿ ವಿಫಲರಾಗಿರುತ್ತಾರೆ.

ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತ-2 ರವರಿಗೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವಂತೆ ಕಛೇರಿಗೆ ಆದೇಶಿಸಲಾಗಿದೆ.

29 ನೇ ಅಕ್ಟೋಬರ್ **2021**

(ಜಿ. ನಂಜುಂಡಯ್ಯ)
ಅಪರ ನಿಬಂಧಕರು ವಿಚಾರಣೆಗಳು-10,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

| | |
|---|---|
| **LIST OF WITNESS EXAMINED ON BEHALF OF DISCIPLINARY AUTHORITY :** | |
| PW-1 : Krishnamurthy (Complainant) (original) | |
| PW-2 : Jayaprakash A (Scrutiny Officer) (original) | |
| **LIST OF WITNESS EXAMINED ON BEHALF OF DEFENSE :** | |
| DW-1 : Sri. Rajegowda (DGO)-(original) | |
| DW-2 : Sri. Raju, Teacher (original) | |
| DW-3: Sri. Revannagowda, Retired Head Master (original) | |
| DW-4: Sri. Maliyappa C.M. Teacher (original) | |
| DW-5: Sri. Praveen Kumar B.G. Teacher (original) | |
| **LIST OF EXHIBITS MARKED ON BEHALF OF DISCIPLINARY AUTHORITY:** | |
| Ex.P.1 : | Complaint of the complainant dated 06.02.2013 (original) |
| Ex.P.2 : | Form No.I dated 18/02/2015 - (original) |
| Ex.P.3 : | Form No. II (Affidavit) dated 18/02/2015 (original) |
| Ex.P.4 : | Copy of representation of teachers dated 27.11.2014 (xerox) |
| Ex.P.5 : | Representation of CRP addressed to Governor and other concerned (4 sheets) (Original) |
| Ex.P.6 : | Investigation Report of Dy.Supdt. of Police, Karnataka Lokayukta, Chikkamagalur dated 01.12.2015 (Original) |
| Ex.P.7 : | Copy of Circular dated 17.07.2013 (Xerox) |

| | |
|---|---|
| Ex.P.8 : | Statement of Sri. Kumar L, Kiran Kumar and copy acknowledgement of CJMS Bank. (Original 179-182 xerox 183) |
| Ex.P.9 | Statement of Sri. M.Nadaf, Jagadish, Basavaraj and Ashok V.K (Original) |
| Ex.P.10: | Copy of the guideline (Xerox) |
| Ex.P.11 : | Endorsement of DDPI dated 20.08.2013 (Xerox) |
| Ex.P.12 : | Official Memorandum dated 08.01.2014 (Attested Xerox) |
| Ex.P.13 : | Official Memorandum order dated 31.03.2015 (Xerox) |
| Ex.P.14 : | Transfer Order dated 01.08.2014. (Xerox) |
| Ex.P.15 : | Letter of Joint Director dated 16.08.2014 (Xerox) |
| Ex.P.16 : | Letter dated 29.12.2014 of BEO, Chickmagalur along with copies of payee list (Xerox) |
| Ex.P.17 : | Quotation of SDM computer, Sathish computers, Chaithanya computers (Xerox) |
| Ex.P.18 : | Comparative Statement of quotations (Xerox) |
| Ex.P.19 : | Copy of work Order dated 10.02.2014 and requisition of SDM computers (Xerox) |
| Ex.P.20: | 12(3) Report dated 08/11/2016 (Xerox) |
| Ex.P.21 | Copies of quotations suzki suiting & shirting, Mangal Trading Co. and platinum exim (Xerox) |
| Ex.P.22 | Letter of HM requesting DGO to depute the treachers dated 06.08.2014 (Xerox) |

| IST OF EXHIBITS MARKED ON BEHALF OF DEFENSE: | |
|---|---|
| Ex.D-1 : | Meeting proceedings dated 05.11.2014 ( Xerox) |
| Ex.D-2 : | Copy of Uniform declaration for the year 2013-14 ( Xerox ) |
| Ex.D-3 : | Certified copy of another meeting proceedings dated 04.12.2013 ( Certified Xerox Copy) |
| Ex.D-4 : | Copies of statement of Ramesh, Lokesh, Md.Ismail, Vishwanathe Gowda, Thimmappa, Riyaz, Ahamed,N.M. Ragh, Chandrashekarappa, M.A. Revanagowda, Ranga Bhovi, Sayed (Xerox) |
| Ex.D-5 : | Copy of Note sheet (Xerox) |
| Ex.D-6 : | Copies of pays lists (Xerox) |
| Ex.D-7 : | Copy of report dated nil of Joint Director ( Xerox ) |
| Ex.D-8 : | Copy of particulars of information under RTI Act ( Xerox) |
| Ex.D-9: | Copies of receipts and payments (Xerox) |
| Ex.D-10: | Copy of notes and orders, receipts, quotations and payments (Xerox) |
| Ex.D-11: | Copy of enquiry committee along with covering letter (Xerox) |
| Ex.D-12: | Copy of letter dated 06.02.2015 (Xerox) |
| Ex.D-13: | Copy of letter dated 06.03.2015 by DGO to DDPI (Xerox) |
| Ex.D-14: | Copy of NSS state award of DGO (Xerox) |
| Ex.D-15: | Representation given by Sri. Raju to DDPI dated 03.11.2014(Xerox) |

Date of Retirement of DGO is **31.08.2030**

**(G. NANJUNDAIAH)**
Additional Registrar (Enquiries)-10
Karnataka Lokayukta,
Bengaluru.

## KARNATAKA LOKAYUKTA

No.UPLOK-2/DE/794/2016/ARE-10

Multi Storied Building,
Dr. B.R. Ambedkar Veedhi,
Bengaluru-560 001.
Dated 09.11.2021.

### RECOMMENDATION

Sub:- Departmental inquiry against Shri Rajegowda, the then Block Education Officer, Chickmagalur - reg.

Ref:- 1) Government Order No.ED 69 DGO 2016 dated 28.12.2016.

2) Nomination order No. UPLOK-2/DE/794/2016 dated 31.12.2016 of Upalokayukta, State of Karnataka.

3) Inquiry report dated 29.10.2021 of Additional Registrar of Enquiries-10, Karnataka Lokayukta, Bengaluru.

~~~~~

The Government by its order dated 28.12.2016 initiated the disciplinary proceedings against Shri Rajegowda, the then Block Education Officer, Chickmagalur, [hereinafter referred to as Delinquent Government Officer, for short as 'DGO'] and entrusted the departmental inquiry to this Institution.

2. This Institution by Nomination order No. UPLOK-2/DE/794/2016 dated 31.12.2016 nominated Additional
~~~~~

Registrar of Enquiries-10, Karnataka Lokayukta, Bengaluru, as the Inquiry Officer to frame charges and to conduct departmental inquiry against DGO for the alleged charge of misconduct, said to have been committed by him.

3. The DGO was tried for the charges of committing several irregularities i.e., not communicating the circular regarding providing uniforms to the schools, demanding bribe from teachers for posting on their transfer, collecting Rs.1000/- each from CRPs for conducting Prathibha Karanji progamme, etc..

4. The Inquiry Officer(Additional Registrar of Enquiries-10) on proper appreciation of oral and documentary evidence has held that, the above charge against the DGO Shri Rajegowda, the then Block Education Officer, Chickmagalur , is ' not proved'.

5. On re-consideration of report of inquiry and all other materials on record, I do not find any reason to interfere with the findings recorded by the Inquiry Officer. Therefore, it is

hereby recommended to the Government to accept the report of Enquiry Officer and exonerate DGO Shri Rajegowda, the then Block Education Officer, Chickmagalur, of the charges leveled against him.

6. Action taken in the matter shall be intimated to this Authority.

Connected records are enclosed herewith.

9/11

(JUSTICE B.S.PATIL)
Upalokayukta,
State of Karnataka.

*BS**